ಅಪರಂಜಿ

ಫೆಬ್ರವರಿ 2004

ತಿಳಿನಗೆಯ ಕಾರಂಜಿ



ಪ್ರಕಾಶ್

ಎಚ್.ಕೆ. ರಾಮಚಂದ್ರಮೂರ್ತಿ

ಸ್ಟೀಫನ್ ಲೀರಾಕ್

ಶಿವು

ಕುಮುದಾ ಪುರುಷೋತ್ತಮ್

ಇಂದಿರ ಮೂರ್ತಿ

ವೈ.ಎನ್ ಗುಂಡೂರಾವ್

ಓಂ ಪ್ರಕಾಶ್

ಎಸ್.ಎನ್ ಶಿವಸ್ವಾಮಿ

ವಾಣಿ ಸುರೇಶ್

ಶಿವು

ಸೂರಿ ಹಾರ್ದಳ್ಳಿ

ಬಿಡಿ ಪ್ರತಿ: ರೂ. 10.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ


ಚಂದಾ ವಿವರ:
ಬಿಡಿ ಪ್ರತಿ: ರೂ. 10.00
ವಾರ್ಷಿಕ ಚಂದಾ ರೂ. 100
ಹತ್ತು ವರ್ಷದ ಚಂದಾ ರೂ. 750
Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ಫೆಬ್ರವರಿ - 2004 ಸಂಚಿಕೆ - 5

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು - 27



○ ಪ್ರಕಾಶ್

ಸರ್ಕಾರದಿಂದ ಭೂಮಿ ಅಕ್ರಮ ಮಾರಾಟ
- ಶ್ರೀ ಏಕಾಂತಯ್ಯ ಆರೋಪ

ಅವರು ಒಬ್ಬರೇ ಆರೋಪಿಸಿದರೆ ಸಾಕೆ??

★★★

ಲಿಂಗ್ದೋ ರಾಜಕಾರಣಿಗಳ ಬಗ್ಗೆ ಹೇಳಿಕೆ; ತೀವ್ರ ಅನಿಸಿಕೆಗಳ ಚಕಮಕಿ
- ಸುದ್ದಿ

ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೊದ್ದ ಹಾಗೆ!!

★★★

Brown ಶುಗರ್ ಮಾರಾಟ ಮಾಡುತ್ತಿದ್ದ ವ್ಯಕ್ತಿಯ ಬಂಧನ
- ಪತ್ರಿಕೆ

ಈ Black ವ್ಯವಹಾರ ತಡೆಗಟ್ಟಲೇಬೇಕು!

★★★

ವಾಹನದ ಮೇಲಿನ ಬರಹ: 'ವಿದ್ಯಾವಾಹಿನಿ ಪ್ರೌಡಶಾಲೆ'

ಆ ಶಾಲೆ ಬೇಗ ಪ್ರೌಢವಾಗಲಿ!!

★★★

'ಮೈಸೂರ ಮಲ್ಲಿಗೆ'ಯ ಕಂಪು, ಇಂಪು ಎಂದೆಂದಿಗೂ ಶಾಶ್ವತವಾಗಿರಲಿ ಅಂತ ಅಪರಂಜಿ ನಗುತ್ತ ಹೇಳಿದಳಂತೆ!!

★★★

ಸೆಂಟ್ರಲ್ ಜೈಲ್ ಇದ್ದ ಸ್ಥಳದಲ್ಲಿ Freedom Park ನಿರ್ಮಿಸುತ್ತಾರಂತೆ!!

★★★

ಜನತಾದಳದ ಬಣಗಳ ವಿಲೀನ: ಕನಸಿನ ಗಂಟೇ?

- ಪತ್ರಿಕೆ

ಇಲ್ಲಿ ಕಗ್ಗಂಟು!!

★★★

ಅಲ್ಪ ಸಂಖ್ಯಾತ ನಿಗಮದ ಇಬ್ಬರು ಅಧಿಕಾರಿಗಳು ಲೋಕಾಯುಕ್ತ ಬಲೆಗೆ

- ಸುದ್ದಿ

ಇಬ್ಬರೇ ತಾನೆ, ಪಾಪ!!

★★★

'ಮುಂದಿನ ಪೀಳಿಗೆ ಕಾಂಕ್ರೀಟ್' ಕಾರ್ಯಾಗಾರ


- ಸುದ್ದಿ

ಅದರಲ್ಲಿ ಯಾವ ಕಾಂಕ್ರೀಟ್ ಸಲಹೆಗಳೂ ಬರಲಿಲ್ಲವಂತೆ!!

★★★



ಸೆರಗಿನ ಕೆಂಡ!!



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಎಚ್.ಕೆ. ರಾಮಚಂದ್ರಮೂರ್ತಿ

'ಕೊರವಂಜಿ' ಓದುತ್ತಿದ್ದ ಅಪ್ಪ ತಾತಂದಿರುಗಳಿಗೂ 'ಅಪರಂಜಿ' ಓದುಗರಿಗೂ ಸ್ಟೀಫನ್ ಲೀಕಾಕ್ ಹೊಸಬನೇನು ಅಲ್ಲ. ಕೆನಡಾದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿದ್ದವನು ಹೆಚ್ಚಾಗಿ ಒಲಿದು ಹಾಸ್ಯ ಸಾಹಿತ್ಯ ಸೃಷ್ಟಿಗೆ. ಉತ್ಪ್ರೇಕ್ಷೆ, ಶ್ಲೇಷೆ (pun) ಹುಚ್ಚುಹಾಸ್ಯ, ವ್ಯಂಗ್ಯ, 'ಲಿಟರಾಲಿಸಮ್' - ಅಂದರೆ ಮಾತಿನ ಪದಶಃ ಅರ್ಥವನ್ನು ಮಾತ್ರ ಎತ್ತಿಕೊಂಡು ಹಾಸ್ಯದತ್ತ ತಿರುಚುವುದು - ಇವೇ ಮುಂತಾದ ಹಾಸ್ಯದ ಯಾವತ್ತೂ ಸ್ವರಗ್ರಾಮ, (gamut) ಗಳನ್ನು ಯಥೋಚಿತವಾಗಿ ಮೀಟಿ, ಎಳೆದು, ಕಿರಲಿಸಿ ನಗೆ ಬರಿಸುವ ಲೀಕಾಕ್‌ನ ಪ್ರತಿಭೆ ಅಪ್ರತಿಮ... ಅವನ ಒಂದು ನಗೆ ಲೇಖನದ ಅನುವಾದ ಇದು.

ಇಲ್ಲಿನ ವಸ್ತು ತೀರಾ ಸಾಮಾನ್ಯ - 'ಕ್ಷುದ್ರ' ಅಂದರೂ ತಡೆದೀತು. ಫೋಟೋ ತೆಗೆಸಿಕೊಳ್ಳುವಾಗ ಆಗುವ 'ಕಿರಿ ಕಿರಿ' 'ಚಿತ್ರ ಹಿಂಸೆ' (ಅದು ನಾ. ಕಸ್ತೂರಿಯವರ ಶಬ್ದ) ಒಂದರ್ಥದಲ್ಲಿ ಸ್ವಯಂಕೃತಾಪರಾಧ ಹಾಗೂ ಆತ್ಮರತಿಯ ಒಂದು ಮುಖ. ಆಗ ಉದ್ಭವಿಸುವ ಇಂಗಿತ, ಸ್ವಗತ, ಅನಿಸಿಕೆ, ಆಡಲಾರದ ಅನುಭವ ಎಂದು ಮುಂತಾದ ಅಮೂರ್ತಗಳಿಗೆ ಉತ್ಪ್ರೇಕ್ಷೆಯ ಮೂಲಕ ಮಾತು ಜೋಡಿಸಿ ಲೀಕಾಕ್ ಹೇಗೆ ನಗೆಯ ರಂಗು ಬಳಿಯುತ್ತಾನೆ, ನೀವೇ ನೋಡಿ.

ಮೂಲ: ಸ್ಟೀಫನ್ ಲೀಕಾಕ್‌ನ "Laugh parade" ನಿಂದ

ಪ್ರಮಾದಕ್ಕಾಗಿ ವಿಷಾದ

ಜನವರಿ ತಿಂಗಳ ಹಾಸ್ಯೋತ್ಸವ ವಿಶೇಷಾಂಕದಲ್ಲಿ ನಮ್ಮ ಅಚಾತುರ್ಯದಿಂದ ಒಂದು ಪ್ರಮಾದವಾಗಿದೆ. ಶ್ರೀಯುತ ಎಚ್.ಕೆ. ರಾಮಚಂದ್ರ ಮೂರ್ತಿಯವರು ಆರಿಸಿ ಕೊಟ್ಟಿರುವ ''ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ'' ಮಾಲಿಕೆಯ ಮೊದಲ ಬರಹ ''ಪಿಕ್‌ವಿಕ್ ಮಹಾಶಯನ ರಥಯಾತ್ರೆ'' ಎಂಬ ಲೇಖನವನ್ನು ಕನ್ನಡಿಸಿದವರು, ಖ್ಯಾತ ಸಾಹಿತಿ ಡಾ|| ಪ್ರಭುಶಂಕರ್ ಅವರು. ಇದನ್ನು ಶ್ರೀ ಎಚ್.ಕೆ. ರಾಮಚಂದ್ರ ಮೂರ್ತಿಯವರೆಂದು ತಪ್ಪಾಗಿ ಅಚ್ಚಿಸಲಾಗಿದೆ. ಅಕಸ್ಮಾತ್ತಾಗಿ ಆಗಿರುವ ಈ ತಪ್ಪನ್ನು, ಓದುಗರು, ಶ್ರೀ ರಾಮಚಂದ್ರ ಮೂರ್ತಿಯವರು, ಡಾ|| ಪ್ರಭುಶಂಕರ್ ಅವರು ಮತ್ತು ದೇವರು ಕ್ಷಮಿಸಬೇಕೆಂದು ಅಪರಂಜಿ ಪರವಾಗಿ ನನ್ನ ನಮ್ರ ಬಿನ್ನಹ.

ಎಂ. ಶಿವಕುಮಾರ್
ಸಂಪಾದಕ, ಅಪರಂಜಿ

ಫೋಟೋ ಸ್ಟುಡಿಯೊದಲ್ಲಿ

– ಸ್ಟೀಫನ್ ಲೀಕಾಕ್

''ನನ್ನದೊಂದು photo ಬೇಕು' ಅಂದೆ.

ಅವನು ನಿರುತ್ಸಾಹದಿಂದ ನನ್ನ ಮುಖ ನೋಡಿ, ಜೋಲು ಮೋರೆ... ಹಳೆಯದೊಂದು ಪ್ಯಾಂಟು ತಗಲಿಸಿಕೊಂಡಿದ್ದ... ಮಂಕು ಸುರಿಯುವ ಕಣ್ಣುಗಳು... ಪ್ರಕೃತಿ ವಿಜ್ಞಾನಿಯ ಹಾಗೆ ಕಂಡ. ಬಿಡಿ, ಅವನ ವರ್ಣನೆ ಏಕೆ ಬೇಕು? ಎಲ್ಲರಿಗೂ ಗೊತ್ತು, ಒಬ್ಬ ಫೋಟೊಗ್ರಾಫರ್ ಹೇಗಿರ್ತಾನೆ ಅಂತ.

'ಅಲ್ಲಿ ಕೂತ್ಕಳಿ... ಸ್ವಲ್ಪ ವೆಯಿಟ್ ಮಾಡ್ಬೇಕು'. ಒಂದು ಗಂಟೆ ಕೂತು ಕಾದೆ... 1912ನೇ ಇಸವಿಯ Ladies Companion, 1902 ರ Girls Magazine, 1888ರ Infants Journal ಎಲ್ಲವನ್ನೂ ತಿರುವಿ ಹರಡಿದ್ದಾಯಿತು. ಇಂಥ ನನ್ನ ಮುಖ ಇಟ್ಕಂಡು ಈ ವ್ಯಕ್ತಿಯ ಖಾಸಗಿ ವೈಜ್ಞಾನಿಕ ಸಂಶೋಧನೆಗಳಿಗೆ ಅಡ್ಡಿ ಮಾಡುತ್ತಿದೀನಿ ಅಂತ ಅಳುಕು ಶುರುವಾಯ್ತು.

ಒಂದು ಗಂಟೆ ಆದಮೇಲೆ ಆತ ತನ್ನ ಖಾಸಗಿ ಕೋಣೆಯಿಂದ ಈಚೆ ಬಂದ.

'ಒಳಕ್ಕೆ ಬನ್ನಿ' ಸಿಡುಕಿನ ಧ್ವನಿ.

ಒಳಕ್ಕೆ ಹೋದೆ 'ಕೂತ್ಕಳಿ' ಅಂದ.

ಎಲ್ಲಿಂದಲೋ ಪ್ರಖರವಾಗಿ ಬರುತ್ತಿದ್ದ ಸೀಳು ಬೆಳಕಿನ ಮುಂದೆ ಕೂತೆ.

ಅವರು ಒಂದು ಯಂತ್ರವನ್ನು ದೂಡಿ ತಂದು ಕೋಣೆ ನಡುವೆ ನೆಟ್ಟು ತೆವಳಿಕೊಂಡು ಹೋಗಿ ಅದರ ಹಿಂದೆ ನಿಂತ.

ಒಂದೆ ನಿಮಿಷ ನನ್ನ ಕಡೆ ನೋಡಿದ ಹಾಗೆ ಮಾಡಿ ಹೊರಕ್ಕೆ ಬಂದ. ಒಂದು ಕೋಲಿನ ತುದಿಗೆ ಸಿಕ್ಕಿಸಿದ್ದ ಕೊಕ್ಕೆಯಿಂದ ಕಿಟಕಿ ಪರದೆಗಳನ್ನು ಪಕ್ಕಕ್ಕೆ ದೂಡಿದ. ಅವನಿಗೆ ತುರ್ತಾಗಿ ಗಾಳಿ - ಬೆಳಕು ಬೇಕಾಗಿತ್ತು. ಮತ್ತೆ ಯಂತ್ರದ ಹಿಂದಕ್ಕೆ ತೆವಳಿ ಹೋಗಿ ನಿಂತ ಒಂದು ಸಣ್ಣ ಕಪ್ಪು ಚೌಕದಿಂದ ತನ್ನ ತಲೆ ಮುಚ್ಚಿಕೊಂಡ. ಈ ಬಾರಿ ತೆಪ್ಪಗೆ ನಿಂತಿದ್ದ. ಅವನು ಭಜನೆ ಮಾಡುತ್ತಿರಬಹುದೇ? ನಾನೂ ತೆಪ್ಪಗಿದ್ದೆ.

ಬಹಳ ಹೊತ್ತಿನ ಮೇಲೆ ಅವನು ಈಚೆಗೆ ಬಂದಾಗ ಅವನು ತುಂಬಾ 'ಸೀರಿಯಸ್' ಆಗಿದ್ದ ತಲೆ ಅಲ್ಲಾಡಿಸಿದ.

'ಮುಖ ಸ್ವಲ್ಪವೂ ಸರಿಯಾಗಿಲ್ಲ ರೀ....' ಅಂದ.

'ಅದು ನನಗೂ ಗೊತ್ತು... ಬಹಳ ಕಾಲದಿಂದ ಗೊತ್ತು' ಮತ್ತೆ ಅವನ ದೀರ್ಘ ನಿಟ್ಟುಸಿರು....

'Three Quarters Full ಆದರೆ ಮುಖ ಸ್ವಲ್ಪ ಸರಿ ಹೋಗಬಹುದು'

'ಹೌದೌದು' ಕಟ್ಟುತ್ಸಾಹದಿಂದ ಉಬ್ಬಿದೆ. ಈ ಮನುಷ್ಯನಲ್ಲಿಯೂ ಇಂಥ ಮಾನವೀಯತೆ ಇದೆಯಲ್ಲಾ ಅಂತ ಸಮಾಧಾನವಾಯಿತು. ನಾನು ಮತ್ತೆ ಶುರುಮಾಡಿದೆ 'ಹೌದು... ನಿಮ್ಮ ಮುಖವೂ ಹಾಗೆಯೇ ಆದೀತು ಬಿಡಿ..... ಎಷ್ಟೋ ಮುಖಗಳು ಮೇಲು ನೋಟಕ್ಕೆ ಒಣಗಿ ಕುಗ್ಗಿ ವಕ್ರವಾಗಿ ಕಂಡರೂ Three quarters full ಮಾಡಿದರೆ.....'

ಅವನಿಗೆ ನನ್ನ ಮಾತುಗಳು ಕೇಳಿಸುತ್ತಿರಲಿಲ್ಲ. ಸೀದಾ ಅವನು ನನ್ನ ಹತ್ತಿರ ಬಂದು ನನ್ನ ತಲೆಯನ್ನು ಒತ್ತಿ ಹಿಡಿದು ಪಕ್ಕಕ್ಕೆ ತಿರುಚಿದ. ಅವ ನನಗೆ ಮುತ್ತಿಡಲೆತ್ನಿಸುತ್ತಿರಬಹುದೆಂದೆನಿಸಿ ಕಣ್ಣು ಮುಚ್ಚಿಕೊಂಡೆ. ನನ್ನ ಊಹೆ ತಪ್ಪಾಗಿತ್ತು.

ಪುನಃ ಅವನು ನನ್ನ ತಲೆಯನ್ನು ಅದು ತಿರುಗುವಷ್ಟು ಸುತ್ತು ತಿರುಚಿ ನೋಡುತ್ತ ನಿಂತ.

ಮತ್ತೆ ನೀಳವಾದ ನಿಟ್ಟುಸಿರು.

'ಈ ನಿಂ ತಲೆ ನನಗೆ ಇಷ್ಟವಾಗುಲ್ಲ' ಎಂದ. ನಂತರ ಯಂತ್ರದ ಬಳಿ ಹೋಗಿ ಬಗ್ಗಿ ನಿಂತು ನೋಡಿದ: 'ಸ್ವಲ್ಪ ಬಾಯಿ ಬಿಡರೀ' ಅಂದ. ನಾನು ಬಾಯಿ ಬಿಡುವುದರಲ್ಲಿದ್ದೆ. ಅಷ್ಟರಲ್ಲಿ ಅವನು 'ಬಾಯಿ ಮುಚ್ಚಿಕೊಳ್ಳಿರೀ! ಎಂದು ಅವಸರಿಸಿದ. ದೂರದಲ್ಲಿ ನಿಂತು ನೋಡಿದ.

'ನಿಂ ಕಿವಿಗಳು ಬಲೆ ಕೆಟ್ಟದಾಗಿವೆ ಕಣ್ರೀ' ಎಂದವನೇ 'ಸ್ವಲ್ಪ ಅವುಗಳ್ನ ಕೆಳಕ್ಕೆ ಉಳಿಯಬಿಡ್ರಿ, ಥ್ಯಾಂಕ್ಸ್.... ಈಗ ಕಣ್ಣುಗಳು.......ರೆಪ್ಪೆಗಳನ್ನು ಅಲುಗಿಸಿ ಕಣ್ಣು ಹೊರಳಿಸಿ... ಕೈಗಳು ಮಂಡಿ ಮೇಲಿರಲಿ please ಮುಖಾ ಸ್ವಲ್ಪ ಮೇಲೆತ್ತಿ. ಹಾSSSಗೆ Yes... That's Better . . . . ಕೊಂಚ ಜೋರಾಗಿ ಉಸಿರು ತಗೋಳಿ... great ಬೆನ್ನು ಸ್ವಲ್ಪ ಗೂನು ಆಗಿರಲಿ That's it ಸೊಂಟ ಚಿಕ್ಕದು ಮಾಡ್ಕಳಿ. ಹಾ!' ಕುಂಡೆ ಕೆಳಭಾಗವನ್ನು ಮೊಳಕ್ಕೆ ತನಕ ಮೇಲಕ್ಕೆ ತಿರುಚಿಬಿಡಿ... ತಥ್.... ಏನೇ ಆದ್ರು ನಿಂ ಮುಖ ನನಗೆ ಸರಿ ಬರಲ್ಲಾರೀ.. ಅದು ಶಾನೆ ಅಗಲವಾಯ್ತು...'' ಎಂದೆಲ್ಲಾ ಬಡಬಡಿಸಿದ.

ಸ್ಟೂಲಿನ ಮೇಲೆ ಕುಕ್ಕರಿಸಿದ್ದ ನಾನೂ ವೀರಾವೇಶದಿಂದ 'ರೊಯ್ಯ'ಂದು ತಿರುಗಿದೆ... ಅತನ ಮೇಲೆ ಎಗರಿ ಬಿದ್ದೆ.... ಆದರೆ ಅತ್ಯಂತ ಘನತೆ ಗೌರವಗಳಿಂದ ಬೊಗಳಿದೆ....

''ಇದು ನನ್ನ ಮುಖ ಕಣ್ರೀ... ಮಿಸ್ಟರ್... ತಿಳೀತಾ? ನಿಮ್ಮ ಮುಖಾ ಅಲ್ಲಾ ನನ್ ಮುಖಾ... ನಲ್ವತ್ತು ವರ್ಷ ಅದನ್ನೆತ್ತಿಕೊಂಡು ತಿರುಗಾಡಿಧೀನಿ.... ಬಾಳಿ ಬದುಕಿ ಮಾಡಿಧೀನಿ ಅಂದು ಅಪಸ್ಮೋರೆ ಅಂತ ನಂಗೊತ್ತು... ಒಂದು ಚಿತ್ರ ಬರೆಯೋ ಮುಖ ಅಲ್ಲ... ಫೋಟೋ ತೆಗೆಯೋ ಮುಖಾ ಅಲ್ಲ... ಈ ಮುಖಾ ಎಂಬೋದು ನನಗೋಸ್ಕರ ಸೃಷ್ಟಿಸಿದ್ದು ಅಲ್ಲಾ ಆದರೆ..... ಆದರೆ... ಇದು ನನ್ ಮುಖಾ'' ನನಗೆ ಇರುವ ಒಂದೇ ಮುಖ. ಏಕಮಾತ್ರ ಮುಖಾ.... ತಿಳೀತಾ' ನನ್ನ ಧ್ವನಿ ತಾರಕಕ್ಕೇರಿ ಕೀರಲು ಧ್ವನಿಯಾಗಿತ್ತು. ಹಾಗೆಯೇ ಮುಂದುವರಿಸಿದೆ....... 'ಈ ಮುಖವನ್ನು ಹೇಗೆ

ಪ್ರೀತಿಸಬೇಕೆನ್ನುವುದು ನನಗೆ ರೂಢಿಯಾಗಿ ಬಾಯಿ..... ನನ್ನ ಬಾಯಿ... ನಿಮ್ಮ ಬಾಯಿ ಅಲ್ಲಾ.... ಆ ಕಿವಿಗಳು ನನ್ನವು... ಇದನ್ನೆಲ್ಲಾ ತಿಳಿದುಕೊಳ್ಳೋ ಯೋಗ್ಯತೆ ನಿಮ್ಮ ಈ ದರಿದ್ರ ಯಂತ್ರಕ್ಕಿಲ್ಲದೆ ಹೋದರೆ....' ನಾನು ಕೂತಿದ್ದ ಸ್ಟೂಲು ಬಿಟ್ಟು ಮೇಲೇಳುವುದರಲ್ಲಿದ್ದೆ.....

'ಕ್ಲಿಕ್....ಕ್ಲಿಕ್.....' ಅವನು ಯಂತ್ರದ ಸೂತ್ರ ಜಗ್ಗಿದ್ದ - ಫೋಟೋ ತೆಗೆದುದಾಗಿತ್ತು... ಆ ಯಂತ್ರ 'ಷಾಕ್'ನಿಂದ ಇನ್ನೂ ತತ್ತರಿಸುತ್ತಿರುವುದನ್ನು ನೋಡಿದೆ.

'ಭೇಷ್ - ನೀವು ರೇಗಿ ಎಗರಾಡುವಾಗ ನಿಮ್ಮ "features" ಸಕತ್ತಾಗಿ ಬಂದ್ವು...... ಕ್ಲಿಕ್ ಮಾಡಿ ಬಿಟ್ಟೆ' ಸಂತೋಷದಿಂದ ಅವನು ತುಟಿಗಳನ್ನು ಸೊಟ್ಟಗೆ ತಿರುವುತ್ತಿದ್ದ.

''ಓಹೊ.... features ಓ.....' ಕಟು ವ್ಯಂಗ್ಯದಿಂದ ಕಿರಲಿದೆ.... ನಾನು ಮುಖದ features ಗಳ್ನ ಚುರುಕು ಮಾಡಬಲ್ಲೆ ಅಂತ ಗೊತ್ತಿರಲಿಲ್ವೋ.... ಹೋಗಲಿ... photo ನೋಡೋಣ ತೋರಿಸಿ... ಹೇಗೆ ಬಂದಿದೆ ಅಂತ'... 'ನೋಡೋಕೆ ಅಲ್ಲೇನಿದೆ...? ಇನ್ಮೇಲೆ ನಾನು ಮೊದಲು ನೆಗಟಿವ್‌ಗಳ್ನ ಡೆವಲಪ್ ಮಾಡಬೇಕು.... ಶನಿವಾರ ಬನ್ನಿ.... ನೆಗಟಿವ್‌ಗಳ್ನ ನೋಡುವಿರಂತೆ'

ಶನಿವಾರ ಮತ್ತೆ ಸ್ಟುಡಿಯೋಗೆ ಹೋದೆ. ಅವನು ನನ್ನನ್ನು ಒಳಕ್ಕೆ ಕರೆದ. ಮಾತನಾಡಲಿಲ್ಲ... ಈಗ ಹೆಚ್ಚು ಗಂಭೀರವಾಗಿದ್ದ.... ಅಂತ ಅನಿಸಿತು - ಅವನ ವರ್ತನೆಯಲ್ಲೊಂದು ರೀತಿಯ ಹೆಮ್ಮೆ ಇತ್ತು.

ದೊಡ್ಡ ಫೋಟೋಗ್ರಾಫಿನ 'ಪ್ರೂಫ್'ನ್ನು ಹೊರಕ್ಕೆ ತೆಗೆದ... ಇಬ್ಬರೂ ನಿಶ್ಶಬ್ದವಾಗಿ ಅದನ್ನು ನೋಡಿದೆವು.

'ಇದು ನನ್ನ ಫೋಟೋ ಹೌದಾ...' ನಾನು ಕೇಳಿದೆ.

'ಹೌದೌದು... ಇದು ನಿಮ್ಮದೇ...' ಇಬ್ಬರೂ ಅದನ್ನು ಮತ್ತೆ ನೋಡುತ್ತಾ ನಿಂತೆವು.

'ಈ ಕಣ್ಣುಗಳು... ನನ್ನ ಕಣ್ಣುಗಳ ಥರಾ ಇಲ್ವಲ್ಲಾ?'

'ಓ, ನೋ... ನಾನು ಅವುಗಳ್ನ ರಿಟಚ್ ಮಾಡ್ದೆ... ಈಗ ಅವು ಅದ್ಭುತವಾಗಿ ಬಂದಿವೆ... ಅಲ್ವಾ?'

'ಫೈನ್... ಆದರೆ ಈ ಕಣ್ಣಿನ ಹುಬ್ಬುಗಳು ಮಾತ್ರ ನನ್ನ ಹುಬ್ಬುಗಳಲ್ಲ....'

'ನೋ...' ಅಂದವನೇ ನನ್ನ ಮುಖ ಒಂದು ಕ್ಷಣ ದಿಟ್ಟಿಸಿ ನೋಡಿದ. 'ಹೌದು... ನಿಮ್ಮ ಹುಬ್ಬುಗಳನ್ನು ಎಬ್ಬಿ ತೆಗೆದು ಬಿಸಾಕಿದೆ. ಈಗ ನಮ್ಮಲ್ಲಿ ಒಂಥರ ಹೊಸ ಪ್ರಾಸೆಸ್ ಬಂದಿದೆ.... ಡೆಲ್‌ಫೈಡ್ ಅಂತ. ಈ ಹೊಸ ಪ್ರಾಸೆಸ್‌ನಲ್ಲಿ ಏನು ಬೇಕಾದರೂ ಕಿತ್ತು ಹಾಕಬಹುದು - ಸೇರಿಸಬಹುದು. ಈಗ ನೀವೇ ನೋಡಿ ನಿಮ್ಮ ಹುಬ್ಬಿನ ಪೊರಕೆ ಕೂದಲ್ನ ಆಚೆಗೆ ತಳ್ಳಿ ಬಿಟ್ಟಿದೀನಿ. ನಿಮ್ಮ ತಲೆ ಬುರುಡೆ ಮೇಲಿಂದ ಹುಬ್ಬುಗಳು ಜೋಲಾಡುವುದು ಕಂಡರೆ ಅಸಹ್ಯವಾಯ್ತು...' ತೊಕತೊಕನೆ ಕುದಿಯುತ್ತಾ ''ಓಹೋ... ಅಸಹ್ಯವಾಯ್ತಾ? ಅಸಹ್ಯವಾಯ್ತಾ?'' ಎಂದೆ.

''ಹೌದು.. ಶಾನೆ ಅಸಯ್‌ಪಾಯ್ತು... ಆದರೆ ಬಿಡಿ I don't care for it... ಹುಬ್ಬಿನ ಕೂದಲನ್ನು ಹೊರ ಭಾಗಕ್ಕೆಳೆದು ಹೊಸ ಹುಬ್ಬಿನ ಲೈನ್ ಮಾಡ್ತಿನಿ ಬೇಕಾದರೆ....

'ಅದ್ಸರಿ... ಈ ಚಿತ್ರದಲ್ಲಿ ಕಾಣುವ ಬಾಯಿ... ಅದು ನನ್ನದಲ್ಲವಲ್ಲಾ....' ನನ್ನ ಧ್ವನಿಯಲ್ಲಿದ್ದ ಘೋರ ವ್ಯಂಗ್ಯ ಅವನ ಮುಂದೆ ವ್ಯರ್ಥವಾಗಿತ್ತು.

'ಓ... ಅದಾ? ಒಂಥರ ಬೊಚ್ಚುಬಾಯಿ, ನಿಮ್ಮದು. ಅದನ್ನ ಸ್ವಲ್ಪ ಅಡ್‌ಜಸ್ಟ್ ಮಾಡಿ ಸರಿ ಮಾಡಿದೆ ನೋಡಿ'

'ಕಿವಿಗಳು ಮಾತ್ರ ಪರವಾಯಿಲ್ಲ... ಅವು ನನ್ನ ಕಿವಿಗಳ ಹಾಗೆಯೇ ಇವೆ....' ಎಂದೆ.

'ಹೌದು. ನಿಜ, ಆದರೆ ಕೊನೆಯಲ್ಲಿ ಪ್ರಿಂಟ್ ಮಾಡುವಾಗ ಅದನ್ನೂ ಅಡ್‌ಜಸ್ಟ್ ಮಾಡಿಬಿಡ್ತೀನಿ... ಈ ಇನ್ನೊಂದು ಹೊಸ ಪ್ರಾಸೆಸ್ ಬಂದಿದೆ. ಸಲ್‌ಫೈಡ್ ಅಂತ. ಕಿವಿಗಳನ್ನೇ ಪೂರ್ತಿ ತೆಗೆದು ಹಾಕಬಹುದು.... try ಮಾಡ್ತೀನಿ....

'ಇಲ್ಲಿ ಕೇಳ್ರಿ ಸ್ವಲ್ಪ' ಮಧ್ಯೆ ಬಾಯಿ ಹಾಕಿ ಕಿರಿಚಿದೆ. ನನ್ನೆಲ್ಲಾ ಸಾತ್ವಿಕ ಕೋಪವನ್ನೂ ಹೈ ಓಲ್ಟೇಜ್ ಪಾಯಿಂಟಿಗೆ ಏರಿಸಿ, ಅವನನ್ನು ಸುಟ್ಟುಬಿಡುವಷ್ಟು ಉಗ್ರ ತಿರಸ್ಕಾರದಿಂದ ಕೂಗಿದೆ... 'ಕೇಳ್ರಿ, ಇಲ್ಲಿ... ನಾನು ಬಂದು ಕೇಳಿದ್ದು - ನನ್ನದೊಂದು ಫೋಟೋ ತೆಗೆದುಕೊಡಿ ಅಂತ... ಒಂದು ಸಾಮಾನ್ಯ ಚಿತ್ರ.. ಥೇಟ್ ನನ್ನ ಹಾಗೆಯೇ ಇರುವ, ನನ್ನ ಹೋಲುವ ಒಂದು ಚಿತ್ರ ನನಗೆ ಬೇಕಾಗಿತ್ತು. ಅದರಲ್ಲಿ ನನ್ನ ಈ ಮುಖ - ಭಗವಂತ ಸೃಷ್ಟಿಸಿದ ಈ ಮುಖಾ ಅದೆಷ್ಟೇ ಕ್ಷುದ್ರವಾಗಿರಲಿ, ತುಚ್ಛವಾಗಿರಲಿ, ವಕ್ರವಾಗಿರಲಿ - ಅದು ದೇವರು ನನಗೆ ಕರುಣಿಸಿದಂಥ ಮುಖ ಅದನ್ನು ನಾನು ಸತ್ತ ಮೇಲೆ ನನ್ನ ಪುತ್ರ ಪೌತ್ರಾದಿ, ಬಂಧು ಬಳಗಾದಿ, ಮಿತ್ರ ಸಮೂಹ ನನ್ನ ವಿರಹವನ್ನು ಮರೆತು ನನ್ನ ಸ್ಮರಣೆಗಾಗಿ ಇಟ್ಟುಕೊಳ್ಳಲಿ ಅನ್ನೋದು ನನ್ನ ಮಹದಾಸೆಯಾಗಿತ್ತು. ಆದರೆ ನಾನು ಮೋಸ ಹೋದೆ... ನನಗೆ ಬೇಕಾಗಿದ್ದುದು ಇಲ್ಲಿಲ್ಲ ಹೋಗ್ರಿ ನಿಮಗಿಷ್ಟಬಂದ ರೀತಿಯಲ್ಲಿ ನನ್ನ ಕಣ್ಣು, ಕಿವಿ, ಮೂಗು, ಹುಬ್ಬು, ತುಟಿಗಳನ್ನು ಕಡಿದು, ಕತ್ತರಿಸಿ, ಚೂರು ಚೂರು ಮಾಡಿ 'ಮಜಾ' ಮಾಡ್ರಿ. ನಿಮ್ಮ ಆ ಹೊಲಸು ನೆಗೆಟಿವ್ - ಅದೆಂಥದೇ ಸುಡುಗಾಡು ಅಂತ ಅಂದ್ರಲ್ಲಾ - ಅದನ್ನ ನೀವೇ ಇಟ್ಕಳಿ... ಅದನ್ನ ಸಲ್‌ಫೈಡ್‌ನಲ್ಲಿ ಮುಳುಗಿಸಿ ಬ್ರೋಮೈಡ್ ಆಕ್ಸೈಡ್, Cowhide ಗಳಲ್ಲಿ ಕುದಿಸಿ ನಿಮ್ಮ ಮುಂಡಾ ಮೋಚಿಕೊಳ್ಳಿ ನನ್ನ ಕಣ್ಣು ಕಿತ್ತು, ಬಾಯಿ ಹರಿದು, ಮುಖವನ್ನು ಧಮ್ಮಸ್ ಮಾಡಿ, ನನ್ನ ಕೋಟು, ಪ್ಯಾಂಟು ಗಳನ್ನು ಕಿತ್ತು ತಲೆ ಕೆಳಕಾಗಿ ಹರಿದು ಅಡ್ಡನಾಗಿ ಹೊಲೆದು ಇದರ ಕೆಲಸ ಮುಯಿತು ಅಂತ ನೀವೇ ಹೇಳುವವರೆಗೂ ಅದರ ಮುಂಡಾ ಮೋಚಿಸಿಕೊಳ್ಳಿ ಅದೆಲ್ಲಾ ಮುಗಿದ ಮೇಲೆ ಅದನ್ನು ನಿಮ್ಮ ಬಂಧು ಮಿತ್ರರಿಗೆ ತೋರಿಸಿ ಕುಣಿದಾಡಿ. ನನಗೆ ಅದು ಹಳೆ ಎಕ್ಕಡದ ಸಮಾನ...''

ನನ್ನ ಮಾತು ಇನ್ನೂ ಮುಗಿದಿರಲಿಲ್ಲ ಬಿಕ್ಕಿ ಬಿಕ್ಕಿ ಅತ್ತೆ. 'ಗೊಳೋ' ಎಂದು ಹಲುಬುತ್ತಾ ಅಲ್ಲಿಂದ ಹೊರಟೆ.

ಜೀಸಸ್ ಕ್ರೈಸ್ಟ್ ಲಿಸರ್ಡ್

– ಶಿವು

'ಅಲ್ಲಾ, ಆ ಗಂಗೂಲಿ ಯಾಕೆ ಆ ಗರ ಬಡಿದೋರ ಹಾಗೆ ಓಡಿ, ಔಟಾದ?' ಎಂಬ ಜ್ವಲಂತ ಪ್ರಶ್ನೆಯೊಂದು ಅಂದು ಸಂಜೆ ನಮ್ಮ ಕ್ಲಬ್ಬಿನ ಪ್ರತಿಯೊಂದು ಮೇಜಿನ ಸುತ್ತಲೂ ಚಿಟ್ಟೆಯಂತೆ ಹಾರಾಡಿ, ಕೊನೆಗೆ ನಮ್ಮ ಟೇಬಲ್ಲಿಗೆ ಬಂದು ನೆಲೆಸಿತು. ಕೇವಲ ಹದಿಮೂರು ರನ್ನುಗಳ ಅಂತರದಲ್ಲಿ ಐದು ವಿಕೆಟ್ಟುಗಳನ್ನು ಕಳೆದುಕೊಂಡ ಪಾಪ ಏನು ಸಾಮಾನ್ಯವಾದದ್ದೇ? ಬಾಯಿ ಇದ್ದೇರೆಲ್ಲಾ ತಮ್ಮ ತಜ್ಞ ವಿಶ್ಲೇಷಣೆಗಳನ್ನು ಸುತ್ತಲಿನ ಕೇಳುಗರಿಗೆ 'ವಿಜಯ ಟೈಮ್ಸ್' ನಂತೆ ಮುಫತ್ತಾಗಿ ಹಂಚಲು ಪ್ರಾರಂಭಿಸಿದ್ದರು.

'ಗೆಲ್ಲಬೇಕೂ ಅನ್ನೋ ಆತುರದಲ್ಲಿ ಅವನು ಹಾಗೆ ಮಾಡಿದ. ಆ ಕಡೆ ಇದ್ದ ದಾಂಡಿಗ ಯಾಕೆ ಹಾಗೆ ಸುಮ್ಮನೆ ನಿಲ್ಲಬೇಕಾಗಿತ್ತು? ತಕ್ಷಣ ಓಡಿದ್ದರೆ ಅವನೇ ಔಟಾಗಿ, ಗಂಗೂಲಿಗೆ ಜೀವದಾನ ಸಿಗ್ತಾ ಇತ್ತು. ಗೆದ್ದೂ ಬಿಡ್ತಿದ್ದವ್ರೋ ಏನೋ'' ಅಂದ ರೆಡ್ಡಿ.

ಇದಕ್ಕೆ ಉತ್ತರವಾಗಿ ರಾಮು ''ಕಿಲ್ಲರ್ ಇನ್‌ಸ್ಟಿಂಗ್ಟ್'' ಎಂದು ಹೇಳಿ ಸುಮ್ಮನಾದ. ರಾಮುವಿನದು ಕೀಟಲೆ ಸ್ವಭಾವ. ಈ ಒಂದು ಪದಸಮುಚ್ಚಯವನ್ನು ಹೇಳಿದ ತಕ್ಷಣ, ಆನಂದನಿಂದ ಈ ಕುರಿತು ವಿಶ್ಲೇಷಣೆಯ ಒಂದು ಮಹಾಪೂರವೇ ಹರಿದು ಬರುತ್ತದೆಂದು ಅವನಿಗೆ ಅನುಭವದಿಂದ ತಿಳಿದಿತ್ತು. ಅವನ ನಿರೀಕ್ಷೆ ಸುಳ್ಳಾಗಲಿಲ್ಲ.

''ಸರಿಯಾಗಿ ಹೇಳಿದೆ ರಾಮು, ನಮ್ಮ ಇಂಡಿಯನ್ ಟೀಮಿಗೆ ಕಿಲ್ಲರ್ ಇನ್‌ಸ್ಟಿಂಗ್ಟ್ ಸ್ವಲ್ಪವೂ ಇಲ್ಲ. ಅದಕ್ಕೇ they are experts in snatching defeat from the jaws of victory..... ಓಹೋ, ಏನೋ ಪ್ರಕಾಶ, ಕುಂಟ್ತಾ ಇದ್ದೀ. ಬಾ ಇಲ್ಲೇ ಕೂಡು... ಡೇಯ್ ಜೋಸೆಫ್, ಅಯ್ಯ ವಂದಿರ್ಕ್ಕಾರ್...'' ಎನ್ನುತ್ತಾ ಆನಂದ ತನ್ನ ಭಾಷಣವನ್ನು ಮರೆತು ಆಗತಾನೆ ತಮ್ಮ ಮೇಜನ್ನು ಸೇರಿದ ಪ್ರಕಾಶನಿಗೆ ಪಾನೀಯ ವ್ಯವಸ್ಥೆಯನ್ನು ಮಾಡಲು ತೊಡಗಿದ.

ಪ್ರಕಾಶ ನಮ್ಮ ಕ್ಲಬ್ಬಿನ ಅಧ್ಯಕ್ಷ. ನಗುಸರಸಿ. ಅವನು ಕುಂಟುತ್ತಿದುದನ್ನು ನೋಡಿ ನಮಗೆಲ್ಲಾ ಸ್ವಲ್ಪ ಮುಜುಗರವೇ ಆಯಿತು ಅನ್ನಿ. ನಾನು 'ಏನಾಯ್ತು?' ಎನ್ನುವಂತೆ ಹುಬ್ಬೇರಿಸಿದೆ.

'ಅಂಥಾದ್ದೇನಿಲ್ಲ, ಶಿವ, ಕಳೆದ ವಾರ ಬೆಳಗ್ಗೆ ಬಚ್ಚಲು ಮನೆಗೆ ಹೋಗುತ್ತಿದ್ದಾಗ ಸ್ವಲ್ಪ ಜಾರಿದ ಹಾಗೆ ಆಯ್ತು. ಬಾಗಿಲು ಹಿಡಕೊಂಡೆ. ಸ್ವಲ್ಪ ಹೊತ್ತಿನ ನಂತರ ಸೊಂಟಾನೂ ಹಿಡಕೊಂಡುಬಿಡ್ತು. ತಡೀಲಾರದ ನೋವು. ಡಾಕ್ಟರು, ಮೈಲ್ಡ್ ಸ್ಪೈನಲ್ ಇಂಜುರಿ ಆಗಿದೆ, ಒಂದು ವಾರ ಕಂಪ್ಲೀಟ್ ಬೆಡ್ ರೆಸ್ಟ್ ಮಿಸುಕಾಡೋ ಹಾಗಿಲ್ಲ. ಅಂದು ಬಿಟ್ರು.

''ಅರೆ, ನನ್ನ ಹೆಂಡ್ತಿ ನನ್ನನ್ನ ಯಾವಾಗಲೂ ಸ್ಟೈನ್‌ಲೆಸ್ ಅಂತಿರ್ತಾಳೆ. ನನಗೆ ಸ್ಟೈನಲ್ ಇಂಜುರಿ ಆಗುಕ್ಕೆ ಹೇಗೆ ಸಾಧ್ಯ?'' ಅಂತ ಒಂದು ಕಿಡಿ ಹಾರಿಸಿದೆ. ಡಾಕ್ಟರು ನಗಲಿಲ್ಲ. ಪ್ರ್ಯೂಮರ್ಲೆಸ್ ಬಿ. ಅಂತ ಅಂದುಕೊಂಡೆ. ನೋವು ಜಾಸ್ತಿಯಾದಂತೆ ಅನ್ನಿಸಿತು. ಅಂತೂ ಇವತ್ತಿಗೆ ಡಾಕ್ಟ್ರು ವಿಧಿಸಿದ ಗಡುವು ಮುಗೀತು. ಈಗ ನಡಿಯುವಾಗ ನೋವೇನೂ ಇಲ್ಲ. ಆದ್ರೂ ಕುಂಟೋ ಅಭ್ಯಾಸ ತಪ್ಪೋದಕ್ಕೆ ಇನ್ನೂ ಒಂದೆರಡು ದಿನಗಳು ಬೇಕಾಗಬೋದು.'' ಅಂದ ಪ್ರಕಾಶ.

ಅಷ್ಟು ಹೊತ್ತಿಗೆ ಜೋಸೆಫ್ ಬಂದು ತನ್ನ ಪರಿಚಾರಿಗೆ ಮುಗಿಸಿ ಹೋದ.

''ಒಂದು ವಾರ ಸಂಪೂರ್ಣವಾಗಿ ಹಾಸಿಗೆಯಲ್ಲೇ ಮಲಗಿದ್ದೇನೋ. ಬೋರ್ ಆಗಲಿಲ್ವೇ?'' ಅಂದ ರೆಡ್ಡಿ.

''ಖಂಡಿತಾ ಆಗಲಿಲ್ಲ, ರೆಡ್ಡಿ. ಮೊದಲ ಒಂದೆರಡು ದಿನ ಸುಮ್ಮನೆ ಹೊದ್ದು ಮಲಗಿಬಿಡೋಣ ಅನ್ನಿಸಿದ್ದು ನಿಜ. ಆಮೇಲೆ ಓದುಕ್ಕೆ ಬೇಕಾದಷ್ಟು ಪುಸ್ತಕಗಳು ಸಿಕ್ಕಿದದರಿಂದ ಕಾಲ ಹೋಗಿದ್ದೇ ಗೊತ್ತಾಗಲಿಲ್ಲ. ಅಲ್ಲದೇ ಟಿ.ವಿ. ಬೇರೇ ಇತ್ತಲ್ಲಾ. ದೇವರ ದಯೆ. ಟೆಸ್ಟ್ ಮ್ಯಾಚ್‌ನ ಐದು ದಿನಗಳೂ ನನ್ನ ಬೆಡ್‌ರೆಸ್ಟ್ ಅವಧಿಗೆ ಹೊಂದಿಕೊಂಡವು. ಅಂದಹಾಗೆ ಒಂದು ಬಹಳ ಇಂಟೆರೆಸ್ಟಿಂಗ್ ಪ್ರೋಗ್ರಾಮ್ ನೋಡಿದೆ ಕಣ್ರೋ ಬಿಬಿಸೀಲೀ...''

''ಏನದು ಅಂಥಾ ಪ್ರೋಗ್ರಾಮೂ, ಬರೀ ನ್ಯೂಸ್ ಛಾನಲ್ ಅಲ್ವೇ ಅದು?'' ಆನಂದನ ಪ್ರಶ್ನೆ.

''ಹಾಗೇನೂ ಇಲ್ಲಾ ಕಣೋ, ಘಂಟೆಗೊಮ್ಮೆ ಹದಿನೈದು ನಿಮಿಷ ಜಗತ್ತಿನ ಸಮಾಚಾರಾನೆಲ್ಲಾ ಬಿತ್ತರಿಸ್ತಾರೆ ನಿಜ. ಆದರೆ ಮಿಕ್ಕ ಸಮಯದಲ್ಲಿ ಬೇರೆ ಬೇರೆ ಕಾರ್ಯಕ್ರಮ ಮೂಡಿಬರತ್ತೆ. ಅವರು ನಾನು ಟಿ.ವಿ. ಆನ್ ಮಾಡಿದಾಗ, ತೆರೆಯ ಮೇಲೆ ಯಾವನೋ ಒಬ್ಬ ತನ್ನ ಕೈಯ್ಯಲ್ಲಿ ಒಂದು ಓತಿಕ್ಯಾತನ ಹಿಡುಕೊಂಡು ಅದರ ಹಿಂದಿನ ಕಾಲಿನಲ್ಲಿನ ಪೊರೆಯನ್ನು ವಿವರಿಸ್ತಾ ಇದ್ದ. ಆ ಓತಿಯನ್ನು ''ಜೀಸಸ್ ಕ್ರೈಸ್ಟ್ ಲಿಸರ್ಡ್'' ಅಂತ ಕರೀತಾರಂತೆ. ಅರೆ, ಇದೇನಪ್ಪಾ ವಿಚಿತ್ರ ಹೆಸರು ಅಂದುಕೊಳ್ತಾ ಇರೋ ಅಷ್ಟರಲ್ಲಿ ತೆರೆಯ ಮೇಲೆ ಒಂದು ಕ್ಲಿಪ್ ಮೂಡಿಬಂತು. ಒಂದು ಕೆರೆಯ ದಂಡೆ. ನೀರಿನ ಅಂಚಿನಲ್ಲಿ ಹೊರವಾಗಿ ಬೆಳೆದಿದ್ದ ಜೊಂಡು ಹುಲ್ಲು. ನೋಡ್ತಾ ಇದ್ದಹಾಗೆ ಈ ಓತಿ ನೀರಿನ ಮೇಲೆ ಓಡಿಬಂದು, ಜೊಂಡಿನ ಮೇಲೆ ಕೂತಿದ್ದ ಒಂದು ಕೀಟವನ್ನ ಗಬಕ್ಕಂತ ನುಂಗಿತು. ಹೀಗೆ ನೀರಿನ ಮೇಲೆ ಓಡೋ ಶಕ್ತಿ ಇರೋದ್ರಿಂದ ಈ ಓತಿನ ಜೀಸಸ್ ಕ್ರೈಸ್ಟ್ ಲಿಸರ್ಡ್ ಅಂತ ಕರೀತಾರಂತೆ. ಯೇಸು ಸ್ವಾಮಿ ನಡೆಸಿದ ಪವಾಡಗಳಲ್ಲಿ ನೀರಿನ ಮೇಲೆ ನಡೆಯೋದೂ ಒಂದು ತಾನೆ....''

''ನ್ಯಾಷನಲ್ ಜಿಯೋಗ್ರಾಫಿಕ್ ನಲ್ಲಿ ಬರುತ್ತಲ್ಲಾ ಅಂಥಾ ಪ್ರೋಗ್ರಾಮೇನೋ ಅದು''

''ನಾನೂ ಹಾಗೇ ಅಂದ್ಕೊಂಡೆ, ಮೊದಲು ನೋಡಿದಾಗ. ಆಮೇಲೆ ತಿಳೀತು ಅದು ಇಂಗ್ಲೆಂಡಿನ ಲೇಕ್ ಡಿಸ್ಟ್ರಿಕ್ಟ್‌ನಲ್ಲಿರೋ ವಿಂಡರ್‌ಮೇರ್ ಸರೋವರದಲ್ಲಿ ನಡೆಯುತ್ತಿದ್ದ ನೀರಿನ ಮೇಲೆ ನಡೆಯುವ ಸ್ಪರ್ಧೆಯ ಒಂದು ವರದಿ ಅಂತ. ಆ ಸ್ಪರ್ಧೆಯಲ್ಲಿನ ಒಂದು ಟೀಮಿನವರು ಈ ಜೀಸಸ್ ಕ್ರೈಸ್ಟ್ ಓತಿಯ ನಡೆಯುವ ವಿಧಾನವನ್ನು ಅನುಕರಿಸಿ ತಮ್ಮ ಕಾಲುಗಳಿಗೆ ವಿಶೇಷ ರಬ್ಬರ್ ಹಾಳೆಗಳನ್ನು ಕಟ್ಟಿಕೊಂಡು ನಡೆಯುವ ಪ್ರಯತ್ನ ನಡೆಸಿದ್ದರೆ, ಇನ್ನೊಂದು ಗುಂಪು ಥರ್ಮೋಕೋಲ್‌ನಲ್ಲಿ ಎರಡು ಪುಟ್ಟ ದೋಣಿಗಳನ್ನು ತಯಾರಿಸಿ ಅವನ್ನು ತಮ್ಮ ಕಾಲುಗಳಿಗೆ ಕಟ್ಟಿಕೊಂಡು ನೀರಿನ ಮೇಲೆ ನಡೆಯುವ ಸನ್ನಾಹದಲ್ಲಿದ್ದರು. ಮಗದೊಂದು ಟೀಮಿನಲ್ಲಿ ಇಬ್ಬರು ಪಾಕಿಸ್ತಾನಿಗಳು ಎರಡು ತೇಲುವ ಸ್ಕೀ ಗಳ ಮೇಲೆ ನಿಂತು ಇನ್ನೆರಡು ತೇಲುವ ಸ್ಕೀ ಊರೆಗೋಲುಗಳಿಂದ ಮುಂದಕ್ಕೆ ಸಾಗುವ ಸಾಹಸವನ್ನು ಮಾಡುತ್ತಿದ್ದರು. ಪ್ರತಿಯೊಂದು ಟೀಮಿನವರೂ ಅತ್ಯಂತ ಚೇತೋಹಾರಿಯಾದ ವೈಜ್ಞಾನಿಕ ಸೃಜನಶೀಲತೆಯನ್ನು ಪ್ರದರ್ಶಿಸುತ್ತಿದ್ದುದಂತೂ ನಿಜ. ಅಷ್ಟಕ್ಕೂ ಅಲ್ಲಿ ಭಾಗವಹಿಸುತ್ತಿದ್ದೋರೆಲ್ಲಾ ಯಾರು ಅಂತೀರಿ. ಕಾಲೇಜುಗಳಿಂದ ಬಂದ ವೈಜ್ಞಾನಿಕ ವಿದ್ಯಾರ್ಥಿಗಳಾಗಿರಲಿಲ್ಲ. ಸಮಾಜದಲ್ಲಿ ಎಲ್ಲೆಲ್ಲೂ ಕಾಣಸಿಗುವ ಅಂಗಡಿ ವ್ಯಾಪಾರಿಗಳು, ಆಫೀಸುಗಳಲ್ಲಿ ಕೆಲಸ ಮಾಡುವ ಗುಮಾಸ್ತೆಗಳು, ವಿಮಾ ಏಜೆಂಟರುಗಳು ಇವರೆಲ್ಲರೂ ಆ ವೀಕ್ ಎಂಡ್ ಒಟ್ಟುಗೂಡಿ, ಸಂತಸದ ಸಮಾರಾಧನೆ ನಡೆಸಿದ್ದಂತಿತ್ತು....''

''ಜನಸಾಮಾನ್ಯರಿಗೆ ಅಂತಹ ವೈಜ್ಞಾನಿಕ ಪ್ರಯೋಗಗಳನ್ನು ಮಾಡೋದಕ್ಕೆ ಉತ್ಸಾಹ, ವ್ಯವಧಾನ, ಧನಸಹಾಯ ಇವೆಲ್ಲಾ ಹೇಗೆ ಸಿಗುತ್ತೋ ಆ ದೇಶದಲ್ಲಿ?'' ಆನಂದ ಅಮಾಯಕನಂತೆ ಕೇಳಿದ.

''ಏನೋಪ್ಪಾ. ಚಿಕ್ಕಂದಿನಿಂದ ಈ ಬಗೆಯ ಪ್ರಯೋಗಗಳನ್ನು ಮಾಡೋದನ್ನ ಅವರ ಶಿಕ್ಷಣ ವ್ಯವಸ್ಥೇಲೇ ಅಡಕ ಮಾಡಿರೋಹಾಗೆ ಕಾಣುತ್ತೆ. ನಮ್ಮಲ್ಲಿ ವ್ಯಾಪಾರಿಗಳು, ಗುಮಾಸ್ತೆಗಳು, ವಿಮಾ ಏಜೆಂಟರು ಒಟ್ಟಿಗೆ ಸೇರಬೇಕಾದರೆ ಯಾವುದಾದರೊಂದು ಸಮಾಜ ಸೇವಾ ಸೋಗು ಹಾಕಿಕೊಂಡಿರುವ ಸಂಸ್ಥೆಯಲ್ಲಿ ಸಂಜೆಯ ಗುಂಡು ಸಮಾರಾಧನೆಗೆ ಮಾತ್ರ. ಬೆಂಗಳೂರನ್ನ ಸಿಲಿಕಾನ್ ಸಿಟಿ, ಐಟಿ ನಗರ ಅಂತೆಲ್ಲಾ ಕರೀತಾರೆ, ಅಲಸೂರು ಕೆರೆಯಲ್ಲಿ ಇಂತಹ ಒಂದು ಸ್ಪರ್ಧೆ ಆಗೋದನ್ನ ನಾನು ಊಹಿಸಕ್ಕೂ ಆಗಲ್ಲ...''

''ಯಾಕೆ ಆಗುಲ್ಲ? ಖಂಡಿತಾ ಆಗುತ್ತೆ'' ಅಷ್ಟು ಹೊತ್ತು ಅಂತರ್ಮುಖಿಯಂತೆ ಮೌನವಾಗಿ ಕೂತಿದ್ದ ದೇವು ಒಮ್ಮೆಲೇ ತನ್ನ ಮೌನವನ್ನು ಮುರಿದು, ಮುಂದುವರಿಸಿದ.

''ಹೇಳ್ತೀನಿ ಕೇಳಿ. ಜನವರಿ ಇಪ್ಪತ್ತಾರರ ಬೆಳಗ್ಗೆ ಗಣರಾಜ್ಯ ದಿನಾಚರಣೆಯ ಪ್ರಯುಕ್ತ ಸರ್ಕಾರದವರು ಅಲಸೂರು ಕೆರೆಯಲ್ಲಿ, ನೀರಿನ ಮೇಲೆ ನಡೆಯುವ ಸ್ಪರ್ಧೆ

ಏರ್ಪಡಿಸಿದ್ದಾರೆ. ಎಲ್ಲ ಸಾರ್ವಜನಿಕರಿಗೂ ಭಾಗವಹಿಸಲು ಮುಕ್ತ ಪ್ರವೇಶ. ಬಹಳ ಮುಂಚಿತವಾಗಿಯೇ ಈ ಸ್ಪರ್ಧೆಯನ್ನು ಘೋಷಿಸಿದ್ದರಿಂದ ರಾಜ್ಯದ ಮೂಲೆ ಮೂಲೆಗಳಿಂದ ಅನೇಕ ಅಭ್ಯರ್ಥಿಗಳು ಭಾಗವಹಿಸಲು ಮುಂದೆ ಬಂದಿದ್ದಾರೆ. ಇಗೋ ನೋಡಿ, ಇವರೇ ಬಾಗಲು ಕೋಟೆಯಿಂದ ಬಂದಿರುವ ಸ್ಪರ್ಧಿ, ತೇಜಃ ಪುಂಜವಾದ ವದನ, ಎತ್ತಿ ಕಟ್ಟಿರುವ ಶಿಖೆ, ಕತ್ತಿನಲ್ಲಿ ಕಂಗೊಳಿಸುತ್ತಿರುವ ರುದ್ರಾಕ್ಷಿ ಮಾಲೆ, ಶುಭ್ರ ಕಾವಿ ಉಟ್ಟಿರುವ ಈತ ಬರಿಗಾಲಿನಲ್ಲಿದ್ದಾನೆ. ನೀರಿನ ಮೇಲೆ ನಡೆಯುವುದಕ್ಕೆ ಈತನಿಗೆ ಯಾವ ಉಪಕರಣಗಳೂ ಬೇಡವಂತೆ. ''ನನ್ನ ಯೋಗ ಶಕ್ತಿಯೇ ಸಾಕು'' ಎನ್ನುತ್ತಾನೆ ಈತ.

ಇಲ್ಲಿ ನೋಡಿ ಕಡೂರಿನಿಂದ ಬಂದಿರುವ ಸ್ಪರ್ಧಿ. ಆಯುರ್ವೇದ ಪರಿಣಿತರಂತೆ ಇವರು. ''ನೀರಿನ ಮೇಲೆ ನಡೆಯುವುದಕ್ಕೆ ಈ ಜಲಸ್ಪರ್ಶಿ ಚೂರ್ಣವನ್ನು ಪಾದಗಳಿಗೆ ಉಜ್ಜಿಕೊಂಡರೆ ಸಾಕು. ಪಾಮರರಿಗೆ ಈ ಪವಾಡವನ್ನು ತೋರುವೆ'' ಎನ್ನುತ್ತಿದ್ದಾರೆ.

ಓಹೋ! ಇಲ್ಲಿ ಒಬ್ಬರು ಸಂಭಾವಿತರು, ರಾಜಕೀಯ ಧುರೀಣರಂತೆ ಕಾಣುತ್ತಾರೆ. ಬನ್ನಿ, ನೀರಿನ ಮೇಲೆ ನಡೆಯಲು, ಅವರ ತಯಾರಿ ಹೇಗಿದೆ ಅಂತ ಕೇಳೋಣ. ''ನನ್ನ ತಯಾರಿ? ತಯಾರಿ ಎಲ್ಲಾ ಏಕೆ ಸ್ವಾಮಿ. ನಮ್ಮ ಪಕ್ಷದ ನಾಯಕಿ ನನಗೆ ಈ ಸ್ಪರ್ಧೆಯಲ್ಲಿ ಭಾಗವಹಿಸಿ ಜಯಗಳಿಸಲು ಆದೇಶ ನೀಡಿದ್ದಾರೆ. ಮುಂಬರುವ ಚುನಾವಣೆಗಳಲ್ಲಿ ಆಕೆಗೆ ಅನೇಕ ಪವಾಡಗಳು ಅಗತ್ಯವಾಗಿರುವುದರಿಂದ, ಇಂತಹ ಸ್ಪರ್ಧೆಗಳಲ್ಲಿ ಜಯಗಳಿಸಿದವರನ್ನೇ ರಾಷ್ಟ್ರಮಟ್ಟದ ಕಾರ್ಯದರ್ಶಿ ಪಟ್ಟಕ್ಕೆ ನೇಮಕ ಮಾಡುವುದಾಗಿ ನನಗೆ ಭರವಸೆ ನೀಡಿದ್ದಾರೆ....''

''ಆದರೆ ನೀವು ನೀರಿನ ಮೇಲೆ ನಡೆಯಬೇಕಾದರೆ, ನೀರಿನ ಮೇಲೆ ತೇಲುವ ವಸ್ತುವೊಂದನ್ನು ಕಾಲಿಗೆ...''

''ಅರೆ, ಅದೆಲ್ಲಾ ಯಾಕೆ ಸ್ವಾಮಿ. ನಮ್ಮ ನಾಯಕಿಯ ದರ್ಶನ ಭಾಗ್ಯದಿಂದಲೇ ನನ್ನ ತಲೆ, ಅಲ್ಲ ನನ್ನ ಇಡೀ ದೇಹ ಹಗುರವಾಗಿರುವಂತೆ ಅನ್ನಿಸುತ್ತಿದೆ. ಬರೀ ನಡೆಯುವುದೇ ಏಕೆ, ನಾನು ಓಡಿ ತೋರಿಸುತ್ತೇನೆ.''

ಇಲ್ಲಿ ಇನ್ನೊಬ್ಬರು ಸ್ಪರ್ಧಿ. ನೋಡುವುದಕ್ಕೆ ಇವರೂ ರಾಜಕೀಯದವರಂತೆಯೇ ಕಾಣಿಸುತ್ತಿದ್ದಾರೆ. ಕೈಯಲ್ಲಿ ಒಂದು ಕಮಲದ ಹೂವುಗಳ ಗೊಂಚಲು. ಜಯ ನನಗೆ ಶತಸ್ಸಿದ್ಧ. ಏಕೆ ಗೊತ್ತೆ. ಕಮಲದ ಹೂವುಗಳು ನೀರಿನ ಮೇಲೆ ತೇಲುತ್ತವೇ ಹೊರತು ಎಂದಿಗೂ ಅವು ನೀರಿನಲ್ಲಿ ಮುಳುಗಲಾರವು. ಈ ಗೊಂಚಲಿಗೆ ಜೋತುಬಿದ್ದಿರುವ ನನ್ನನ್ನು ಕಮಲವೇ ಕಾಪಾಡುತ್ತದೆ'' ಎಂಬುದು ಇವರ ಅಂಬೋಣ.


ಸ್ಪರ್ಧೆಯ ಪ್ರಾರಂಭದ ಸಮಯ ಸಮೀಪಿಸುತ್ತಿದೆ. ಈ ಉದ್ದೇಶಕ್ಕಾಗಿಯೇ ನೇಮಿಸಲ್ಪಟ್ಟಿರುವ ಅಧಿಕಾರಿ, ಪ್ರಾರಂಭದ ಜಾಗಟೆ ಬಾರಿಸಲು, ದಂಡವನ್ನು

ಮೇಲಕ್ಕೆತ್ತಿದ್ದಾರೆ. ಅರೆ, ಇದೇನಿದು, 'ನಿಲ್ಲಿಸಿರಿ' ಎಂಬ ಕೂಗು. ನ್ಯಾಯಾಲಯದಿಂದ ಡವಾಲಿ ಜವಾನನೊಬ್ಬನು ಇತ್ತ ಕಡೆಯೇ ಓಡಿ ಬರುತ್ತಿದ್ದಾನೆ. ಆತನ ಕೈಯ್ಯಲ್ಲೊಂದು ಮೊಹರು ಹಾಕಿದ ಲಕ್ಕೋಟೆ. ಅಧಿಕಾರಿ ಲಕ್ಕೋಟೆ ಒಡೆದು ನೋಡುತ್ತಿದ್ದಾರೆ. ಅದರ ಒಕ್ಕಣೆ ಹೀಗಿದೆ.

''ಸರ್ಕಾರದ ವತಿಯಿಂದ ನಡೆಸುತ್ತಿರುವ ಈ ಸ್ಪರ್ಧೆಯ ಭಾಗವಹಿಸುವಿಕೆಗೆ ಸೂಕ್ತ ಮೀಸಲಾತಿ ನೀಡದೆ, ಸಾಮಾಜಿಕ ನ್ಯಾಯಕ್ಕೆ ಅಪಚಾರವಾಗಿರುವುದರಿಂದ, ಈ ಸ್ಪರ್ಧೆಯನ್ನು ನಿಲ್ಲಿಸುವಂತೆ ಈ ಕ್ಷಣದಿಂದಲೇ, ''ಸ್ಟೇ'' ನೀಡಲಾಗಿದೆ. ಕ್ರಿ.ಶ. 2099 ರಲ್ಲಿ ಈ ಸ್ಟೇ ತೆರವಾದ ನಂತರ ಸ್ಪರ್ಧೆಯನ್ನು ಮುಂದುವರಿಸಬಹುದು. ಅಲ್ಲಿನ ವರೆಗೆ ಸ್ಪರ್ಧಿಗಳಿಗೆ ಅನ್ಯಾಯವಾಗದಂತೆ ಅವರೆಲ್ಲರನ್ನೂ ನ್ಯಾಯಾಲಯದ ಬಂಧನದಲ್ಲಿ ಸುರಕ್ಷಿತವಾಗಿ ಇಡುವುದು.''

ಅಧಿಕಾರಿಗಳು ಈ ಒಕ್ಕಣೆಯನ್ನು ಧ್ವನಿವರ್ಧಕದಲ್ಲಿ ಓದುತ್ತಿದ್ದಂತೆ, ಅಸದೃಶ ಪವಾಡವೊಂದು ನಡೆದೇ ಹೋಯಿತು. ಎಲ್ಲ ಸ್ಪರ್ಧಿಗಳೂ ಒಂದೇ ಕ್ಷಣದಲ್ಲಿ ಅಂತರ್ಧಾನವಾದರು.''

ನೀವು ಏನೇ ಹೇಳಿ, ದೇವು, ದೇವುನೇ.



ಹಾಸ್ಯೋತ್ಸವದಲ್ಲಿ

- ಕುಮುದಾ ಪುರುಷೋತ್ತಮ್

ಡಿಸೆಂಬರ್ ಇಪ್ಪತ್ತೈದರ ಹಾಸ್ಯೋತ್ಸವಕ್ಕೆ ಹೋಗುವ ಉತ್ಸಾಹದಿಂದಾಗಿ ಪಾಪತ್ತೆಗೆ ಇಪ್ಪತ್ನಾಕರಿಂದಲೇ ತಯಾರಿಯ ಧಾವಂತ ಆರಂಭವಾಗಿತ್ತು. ''ಕಾರ್ಯಕ್ರಮ ಹತ್ತೂವರೆಗೆ ಅಂತಿದ್ರೂ, ಜನ ನಸುಕಿನಿಂದಲೇ ನುಗ್ಗೋದಕ್ಕೆ ಶುರು ಮಾಡ್ತಾರಂತೆ. ಬೇಗ ಹೋಗ್ದಿದ್ರೆ ಕೂತ್ಕೋಳೋದು ಇರ್ಲಿ ನಿಲ್ಲೋಕ್ಕೂ ಜಾಗ ಇರೋಲ್ವಂತೆ. ನಾವೂ ಆದಷ್ಟು ಬೇಗ ಹೋಗ್ಬೇಕು'' ಎಂದು ಮಾವಯ್ಯನ ಮುಂದೆ ಹತ್ತಾರು ಬಾರಿ ಹೇಳಿ ತಮ್ಮ ಆತಂಕವನ್ನು ಅವರಿಗೂ ವರ್ಗಾಯಿಸಿದ್ದರು. ಇದರ ಬಿಸಿ, ಮನೆ ಕೆಲಸದ ಶೇಷಮ್ಮನಿಗೂ ತಗುಲಿ ಮರುದಿನ ಮುಂಜಾನೆ ಅವಳ ಗುಡಿಸಿಲಿನಲ್ಲೂ ತರಾತುರಿ. ''ಎಲ್ರೂ ಬೇಗೇಳಿ. ನಾನು ಬೇಗ್ನೆ ಕಸ ಬಳಿದು ಅಮ್ಮಾವ್ರ ಮನೆಗೆ ಹೋಗ್ಬೇಕು. ಅದೆಂತದ್ದೋ ಹಾಸ್ಯೋಸ್ತವಕ್ಕೆ ಹೋಗ್ತಾವ್ರೆ. ನನ್ನನ್ನು ಬ್ಯಾಗ್ನೆ ಬಾ ಅಂದವ್ರೆ'' ಎಂದು ಕೆಲಸಕ್ಕೆ ಬಂದೊಡನೆ ''ನಿಮಗಾಗಿ ಬೇಗ್ನೆ ಬಂದೀನಿ. ಈ ಚಳೀಗೆ ಮೈ ಕೈ ಎಲ್ಲಾ ಮಂಜುಗಟ್ಟೈತೆ. ವಸಿ ಬಿಸಿಯಾಗಿ ಕಾಪಿ ಕೊಟ್ರೇ ಕೆಲ್ಸ ಮಾಡಕ್ಕಾಗಾದು'' ಎಂದು ಕಂಡೀಶನ್ ಹಾಕಿದ್ದಳು.

''ಇದನ್ನ ತಿಂಡಿ ಅಂತಾರ್ಯೇ?'' ಮುಂದೆ ಪಾಪತ್ತೆ ಕುಕ್ಕಿ ಹೋದ ರಾಗಿ ಹುರಿ ಹಿಟ್ಟಿನ ಉಂಡೆ ನೋಡುತ್ತಾ ಮಾವಯ್ಯ ರಾಗ ಎಳೆದರು. ''ಇವತ್ತಿಗೆ ಇದೇನೇ. ನಮ್ಮ ನಾಡಿನ ಮಣ್ಣಿನ ಮಕ್ಕಳು ತಿನ್ನೋದು ಇದನ್ನೇ, ಬ್ರೆಡ್ ಕೊಟ್ರೆ ಬ್ರೆ...ಡ್ಡಾ ಅಂತ ರಾಗ ಎಳೀತೀರ, ಬಾಯಿ ರುಚಿಗೆ ಬಲಿಯಾಗ್ಬಾರ್ದು. ಆಹಾರ ದೇಹ ಪೋಷಣೆಗೆ ಅಷ್ಟೇ. ಬದ್ಕೋಕ್ಕೆ ತಿನ್ಬೇಕೇ ಹೊರ್ತು ತಿನ್ನೋಕ್ಕೇ ಬದುಕಬಾರ್ದು....'' ಇತ್ಯಾದಿ ಸಂದರ್ಭಕ್ಕೆ ತಕ್ಕಂತೆ ತರ್ಕ, ತತ್ವ ಉಪಯೋಗಿಸಿ ಮಾತನಾಡಿದ್ದು ಮಾವಯ್ಯನಿಗೆ ಹೊಸತೇನಲ್ಲ. ತೆಪ್ಪನೆ ಬೆಲ್ಲ ಹಾಕಿದ್ದ ಕಪ್ಪು ಉಂಡೆಯನ್ನು ಮುಖ ಕಹಿ ಮಾಡಿಕೊಂಡೇ ಮೆದ್ದರು.

ಮನೆ ಬಿಟ್ಟು ಹೊರಟಾಗ ಎಂಟೂವರೆ. ಮಾವಯ್ಯ ಬಸ್ ಸ್ಟಾಪಿಗೆ ಹೆಜ್ಜೆ ಹಾಕಿದರೆ ಪಾಪತ್ತೆ ಆಟೋ ಸ್ಟ್ಯಾಂಡಿನತ್ತ. ಎಂದಿನಂತೆ ಇಂದೂ ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯೋ ಸಂಗತಿಯೇ. ''ಆಟೋವಿನಲ್ಲಿ ಹೋದ್ರೆ ಹೋಗಿ ಬರೋಕ್ಕೆ ನೂರೈವತ್ತು ಚೌರ'' ಎಂಬುದು ಮಾವಯ್ಯನ ಗೋಳು. ''ಬಸ್ಗೆ ಕಾಯ್ತಾ ನಿಂತ್ರೆ ಅಲ್ಲಿ ಹೋಗಿ ಸೇರೋದ್ರಲ್ಲಿ ಬಾಗಿಲು ಮುಚ್ಚಿ ಎಲ್ರೂ ಮನೆ ಸೇರ್ಕೊಂಡಿರ್ತಾರೆ. ಸಮಯ ಸಂದರ್ಭ ಅಂತಂದ್ರೆ ದುಡ್ಡಿನ ಮುಖ ನೋಡೋಕ್ಕಾಗುತ್ಯೇ? ಆಟೋ ಹತ್ತಿ'' ಎಂದು ಆಜ್ಞಾಪಿಸಿ ತಾನೂ ಹತ್ತಿದರು ಪಾಪತ್ತೆ.

ರಜದ ದಿನವೂ ರಸ್ತೆಯ ತುಂಬಾ ಬಸವನ ಹುಳುವಿನಂತೆ ಚಲಿಸುವ ವಾಹನಗಳ ಸಾಲುಸಾಲು. ''ಇವತ್ತೇನು ಇಷ್ಟೊಂದು ಟ್ರ್ಯಾಫಿಕ್ಕು? ಎಲ್ರೂ ಹಾಸ್ಯೋತ್ಸವಕ್ಕೇ ಹೋಗ್ತಿದ್ದಾರಾ?'' ಪತ್ನಿಯ ಪ್ರಶ್ನೆಗೆ ಮಾವ ಹೊಟ್ಟೆ ಹಿಡಿದು ನಕ್ಕರು. ''ಸೋಮನ ಹಳ್ಳಿಯ ಮುದುಕಿ ತನ್ನ ಕೋಳಿ ಕೂಗೋದ್ರಿಂದ್ಲೇ ಬೆಳಗಾಗುತ್ತೆ ಅಂದ್ಲಂತೆ. ಹಾಗೇ ನೀನು ಹಾಸ್ಯೋತ್ಸವಕ್ಕೆ ಹೋಗ್ತಿಯಾಂತ ಊರ್ನೋರೆಲ್ಲಾ ಅಲ್ಲಿಗೇ ಹೋಗ್ತಾರಾ? ಇಂದು ಕ್ರಿಸ್‌ಮಸ್. ಕ್ರಿಸ್ತ ಬಂಧುಗಳು ಪ್ರಾರ್ಥನೆಗಾಗಿ ಚರ್ಚಿಗೆ ಹೋಗ್ತಿರೋದ್ರಿಂದ ಇಷ್ಟೊಂದು ವಾಹನಗಳ ಓಡಾಟ'' ಎಂದು ವಿವರಣೆ ನೀಡಬೇಕಾಯಿತು. ಕೆಂಪು ಕಂಡಾಗ ನಿಂತು ಹಳದಿ ಕಂಡಾಗ ಸನ್ನದ್ಧವಾಗಿ ಹಸಿರು ಕಂಡಾಗ ಮುನ್ನುಗ್ಗಿ ಅಲ್ಲಲ್ಲಿ ತಡೆಯೊಡ್ಡುವ ಒನ್‌ವೇಗಳನ್ನು ಸುತ್ತಿ ಬಳಸಿ ನ್ಯಾಷನಲ್ ಕಾಲೇಜನ್ನು ಇವರ ಆಟೋ ತಲಪಿದಾಗ ಹತ್ತು ಹೊಡೆಯಲು ಕೇವಲ ಹತ್ತೇ ನಿಮಿಷಗಳಿದ್ದುವು.

ಕಾಲೇಜಿನ ಆವರಣದ ತುಂಬಾ ಜನದ ಪರಿಷೆ. ಆಕಾಶವನ್ನೇ ತಲೆಯ ಮೇಲೆ ಹೊತ್ತಂತೆ ಗಂಭೀರ ಮುಖ ಮುದ್ರೆ ಹೊತ್ತು ಆಗಾಗ ಗಡಿಯಾರ ನೋಡಿಕೊಳ್ಳುತ್ತಾ ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದವರನ್ನು ಕಾರ್ಯಕರ್ತರೆಂದು ಗುರ್ತಿಸಿಕೊಳ್ಳಬಹುದಿತ್ತು. ಮಿಕ್ಕವರೆಲ್ಲಾ ಓಡುವ ರೈಲನ್ನು ಹಿಡಿಯುವವರಂತೆ ವೇಗವಾಗಿ ಕಾರ್ಯಕ್ರಮದ ಪೆಂಡಾಲಿನತ್ತ ಹೋಗುತ್ತಿದ್ದರು. ಇವರಿಬ್ಬರೂ ಅವರಲ್ಲಿ ಒಂದಾಗಿ ತಾವೂ ಓಡಿದರು. ಮೊದಲನೇ ದ್ವಾರದ ಬಳಿ ತಾಂತ್ರಿಕ ಹಾಗೂ ಮಾಧ್ಯಮ ಎಂದು ಬರೆದ್ದಿರಿಂದ ತಂತ್ರ, ಮಾಧ್ಯಮದ ತಿಳುವಳಿಕೆ ಇಲ್ಲದೆ ಎರಡನೇ ದ್ವಾರದ ಬಳಿ ಬಂದರು. ಜಯ ವಿಜಯರಂತೆ ಇಬ್ಬರು ದ್ವಾರಪಾಲಕರು ತಡೆದರು. ''ಪಾಸಾ?'' ಒಬ್ಬ ಕೇಳಿದ.

''ಇಲ್ಲ ಫೇಲು'' ಎಂದರು ಪಾಪತ್ತೆ ಅಚ್ಚರಿಯಿಂದ

''ಹಾಗಾದ್ರೆ ಹಿಂದಕ್ಹೋಗಿ.''

''ಏನೂಂದ್ರೆ, ನಾನು ಹಿಂದೊಮ್ಮೆ ಹಿಂದಿ ಪ್ರವೇಶಿಕಾ ಪರೀಕ್ಷೇಲಿ ನಪಾಸಾಗಿದ್ದು ಇವನಿಗ್ಹೇಗೆ ಗೊತ್ತಾಯ್ತು? ಇಷ್ಟಕ್ಕೂ ಇವನಿಗ್ಯಾಕೆ ಅದೆಲ್ಲಾ?'' ಮಾವಯ್ಯ ಅಲ್ಲೇ ತಲೆ ಚಚ್ಚಿಕೊಂಡರು.

''ನೀನು ಇಷ್ಟು ಪೆದ್ದೀ ಅಂತಾನೇ ಪ್ರವೇಶಿಕಾಗೆ ಪ್ರವೇಶ ಸಿಗಲಿಲ್ಲ. ಅವನು ಕೇಳಿದ್ದು ಪಾಸು ಅಂದ್ರೆ ಪ್ರವೇಶ ಚೀಟೀನ.''

''ಈ ಪಾಸನ್ನು ಹೇಗೆ ದೊರಕಿಸಿಕೊಳ್ಳೋದು? ಅದಕ್ಕೆ ನಾವೇನು ಮಾಡ್ಬೇಕು ಅಥ್ವಾ ಮಾಡಬಾರದು?'' ಈ ಪ್ರಶ್ನೆ ಯಾರನ್ನು ಕೇಳಬೇಕು? ಹಾಸ್ಯೋತ್ಸವದ ಹಾಸ್ಯಬ್ರಹ್ಮರೆಲ್ಲ ಗಂಡಿನವರನ್ನು ಎದಿರ್ಗೊಳ್ಳುವ ಹೆಣ್ಣಿನ ಬಳಗದವರಂತೆ ಸಂಭ್ರಮದಿಂದ ಓಡಾಡುತ್ತಿದ್ದಾರೆ. ಇಂತಹ ವೇಳೆಯಲ್ಲಿ ಪಾಸನ್ನು ಕೊಡಿ ಎಂದರೆ ಕೆನ್ನೆಗೆ ತಟ್ಟಿಬಿಟ್ಟಾರು. ಮಾವಯ್ಯ ಪತ್ನಿಯನ್ನು ಮುಂದಿಟ್ಟುಕೊಂಡು ಮೂರನೇ ದ್ವಾರ ಪ್ರವೇಶಿಸಿದರು.

ಸಭಾಂಗಣದ ಮುಕ್ಕಾಲು ಕುರ್ಚಿಗಳೆಲ್ಲಾ ಖಾಲಿ ಖಾಲಿ. ಆದರೂ ಯಾಕಿಷ್ಟು ನೂಕು ನುಗ್ಗಲು? ಇಬ್ಬರೂ ಮುಂದಿನ ಸಾಲಿನ ಕುರ್ಚಿಯಲ್ಲಿ ಕೂಡಲು ಹೋದರು. ಖಾಲಿ ಕುರ್ಚಿಗಳೆಲ್ಲಾ ನಿರ್ಜೀವ ವಸ್ತುಗಳಾದ ಕರ್ಚೀಫು, ಸ್ವೆಟರ್ರು, ವಾಟರ್ ಬಾಟಲಿ, ಪುಸ್ತಕ, ಚೀಲ ಇತ್ಯಾದಿಗಳಿಂದ ಅಲಂಕೃತವಾಗಿದ್ದುವು! ಗಟವಾಣಿಯೊಬ್ಬಳು ಮುನ್ನುಗ್ಗಿ ಇಲ್ಲೆಲ್ಲಾ ರಿಸರ್ವ್ ಆಗಿದೆ. ಹಿಂದೆ ಹೋಗಿ ಎಂದು ಹಿಂದಕ್ಕಟ್ಟಿದಳು. ಇಬ್ಬರೂ ಹಿಂದ್ಹಿಂದಕ್ಕೆ ಹೋಗುತ್ತಾ ಕೊನೆಯ ಸಾಲಿನ ಕೊನೆಯ ಕುರ್ಚಿಯವರೆಗೂ ಸರಿದರು. ಎಲ್ಲದರ ಮೇಲೆ ನಿರ್ಜೀವ ವಸ್ತುಗಳೆ. ಅದನ್ನು ಕಾಯಲು ಸಾಲಿಗೊಬ್ಬರಂತೆ ಪಹರೇದಾರರು ಇವರ ಹಿಂದೆ ಬಂದ ಧೈರ್ಯಶಾಲಿಯೊಬ್ಬ ಕರ್ಚೀಫು ಮೇಲೆತ್ತಿ ಕುರ್ಚಿಯಲ್ಲಿ ಕುಳಿತ. ಘಟವಾಣಿ ಎರಗಿ ಬಂದಳು. ''ರ್ರೀ, ಮೇಲಕ್ಕೇಳ್ರಿ. ರಿಸರ್ವ್ ಮಾಡಿರೋದು ಕಾಣ್ಸೋಲ್ವಾ? ಇದಕ್ಕೇಂತ ಎಂಟು ಗಂಟೆಗೇ ಬಂದಿದ್ದೀನಿ'' ''ಎಂಟು ಗಂಟೇಗೆ ಬಂದ್ರೆ ನೀವು ಕೂತ್ಕೋಳ್ರಿ. ಬರ್ದೇ ಇರೋರ್ಗೆ ಜಾಗ ಹಿಡ್ಕೊಂಡ್ರೆ, ಬಂದಿರೊವ್ರು ಏನ್ಮಾಡ್ಬೇಕು?''

''ಅವ್ರೂ ಬಂದಿದ್ದಾರ್ರೀ. ಕಾಫಿ ಕುಡ್ಯೋಕೆ ಹೋಗಿದ್ದಾರೆ. ಅದಕ್ಕೂ ನಿಮ್ಮ ಪರ್ಮಿಷನ್ ತೊಗೋಬೇಕಾ?'' ಅವರಿಬ್ಬರ ಮಾತಿನ ಚಕಮಕಿ ಇತ್ತಾದರೆ ಬೇರೊಂದೆಡೆ ಧಡೂತಿ ಆಸಾಮಿಯೊಬ್ಬ ಕೀರಲು ಧ್ವನಿಯ ಚುಲ್ಟಾರಿಯನ್ನು ಕೇರೇ ಮಾಡದೆ ಛತ್ರಿ ತೆಗೆದಿಟ್ಟು ಕುಳಿತುಬಿಟ್ಟ.

''ರ್ರೀ, ನಮ್ಮಪ್ಪ, ಅಮ್ಮ ಬರ್ತಾರೆ, ಏಳ್ರಿ ಮೇಲೆ''

''ಅವ್ರು ಬಂದಾಗ ಬಿಟ್ರಾಯ್ತು. ಇಬ್ರಿಗೆ ಅಂತ ಈ ಸಾಲು ಪೂರಾ ಯಾಕೋ ರಿಸರ್ವ್ ಮಾಡಿದ್ದಿ?'' ಚಾಲೂಕಿಯಾದ ಹುಡುಗ ಬೆದರಲಿಲ್ಲ. ನಾಲ್ಕು ಮಕ್ಕಳನ್ನು ಹಿಂದಿಟ್ಟು ಪ್ರವೇಶಿಸುತ್ತಿದ್ದ ಜೋಡಿಯನ್ನು ಕಂಡು ಕೂಗಿದ. ''ರೀ ಭಾಗ್ಯಾ ಆಂಟೀ, ಶಂಬೂ ಅಂಕಲ್, ನೀವು ಇಲ್ಲಿ ಬನ್ನಿ. ಹೇಗಾದ್ರಾಗ್ಲಿ ಅಂತ ಎಕ್ಸ್‌ಟ್ರಾ ಕುರ್ಚಿ ಹಿಡ್ಕೊಂಡಿದ್ದೆ. ಬಂದಿದ್ದು ಒಳ್ಳೇದಾಯ್ತು.'' ಅವೆಲ್ಲಾ ಧಡ ಧಡ ಬಂದು ಕುಳಿತೊಡನೆ ಧಡೂತಿಗೂ ಅವರಿಗೂ ಬಿಸಿ ಬಿಸಿ ಮಾತಾಗಿ ಕೈ ಕೈ ಹತ್ತುವ ಹಂತಕ್ಕೇರಿತು.

ಕನ್ನಡಿಗರು ಹುಟ್ಟಾ ಶಾಂತಿ ಪ್ರಿಯರು, ಅರ್ಥಾತ್ ಬಿಟ್ಟುಕೊಡುವವರು. ಜನ ಸೇರಿ ಎರಡೂ ಪಾರ್ಟಿಗಳ ನಡುವೆ ಕದನ ವಿರಾಮ ಘೋಷಿಸಿದರು. ''ಸ್ವಾಮಿ ಇದು ಕೇವಲ ಹಾಸ್ಯೋತ್ಸವ ಇಲ್ಲಿ ಕ್ರೋಧ, ಭಯ, ಭೀಭತ್ಸವನ್ನ ತರ್ಬೇಡಿ. ಆದದ್ದಾಯ್ತು. ಸ್ವಲ್ಪ ಹೇಗೋ ಅಡ್‌ಜಸ್ಟ್ ಮಾಡ್ಕೋಳ್ಳಿ.''ಹೇಗೋ ಪರಿಸ್ಥಿತಿ ತುಸು ಹದಕ್ಕೆ ಬಂತು.

ರಾಮಾಯಣದ ಪುಷ್ಪಕ ವಿಮಾನವನ್ನು ಎಷ್ಟು ಜನ ಏರಿ ಕುಳಿತರೂ ಇನ್ನೂ ಒಬ್ಬರಿಗೆ ಜಾಗ ಮಿಕ್ಕಿರುತ್ತಿತ್ತಂತೆ. ಹಾಸ್ಯೋತ್ಸವ ಮಾತ್ರ ಇದಕ್ಕೆ ತಿರುವುಮುರವು. ವರ್ಷದಿಂದ ವರ್ಷಕ್ಕೆ ಜಾಗ ಹೆಚ್ಚು ಮಾಡಿದಷ್ಟೂ ಸ್ಥಾನ ಸಿಗದ ಜನ ಉಳಿದುಬಿಡುತ್ತಾರೆ ಎಂದುಕೊಂಡರು ಮಾವಯ್ಯ. ಎಷ್ಟೋ ಜನರ ಜೊತೆ ನಿಂತುಕೊಂಡೇ ವೇದಿಕೆಯತ್ತ ಜ್ಞಾನ ಹರಿಸಿದರು. ಅಲ್ಲಿ ವಿನೋದ ಗೀತೆಗಳು, ನಗೆ ಭಾಷಣಗಳು, ನಾಟಕ, ವೈ.ಎನ್.ಕೆ. ಹಾಗೂ ಟಿ.ಎಸ್ಸಾರ್ ರವರ ಸ್ಮರಣೆ ನಡೆದಿತ್ತು.

ಹಿಂದೆ ನಿಂತವರಿಗೆ ವೇದಿಕೆ ಬೆಂಕಿ ಪೊಟ್ಟಣದಂತೆ, ಆಸೀನರಾಗಿದ್ದವರು ಲಿಲಿಪುಟ್ ಪ್ರಜೆಗಳಂತೆ ಕಂಡಿರಬೇಕು. ಚಾಳೀಶದ ಅಜ್ಜಿಯೊಬ್ಬಳು ಕೇಳಿದರು.

''ಬಲಗಡೆ ಕೂತಿರೋರು ಅನಂತನಾಗ್ ಅಲ್ವೇ?''

''ಇಲ್ಲಕಣ್ರೀ. ಅವ್ರು ಬಲಗಡೆ ಕೂತಿದ್ದಾರೆ'' ಇದು ಆಕೆಯ ಗೆಳತಿಯ ಮಾತು.

''ಅಯ್ಯೋ ನಿಮ್ಮಿಬ್ಬರ ದೃಷ್ಟಿಗಿಷ್ಟು. ಇವತ್ತು ಅವ್ರು ಬಂದೇ ಇಲ್ಲ. ಕಣ್ಣು ಕಿರಿದುಗೊಳಿಸಿ ಕಷ್ಟಪಟ್ಕೊಂಡು ಯಾಕೆ ತಪ್ಪು ತಪ್ಪೇ ನೋಡೀರ. ಆ ಟಿ.ವಿ. ಮಾನಿಟರ್ ನೋಡಿ. ಎಲ್ಲಾ ಕಾಣಿಸುತ್ತೆ'' ಎಲ್ಲರೂ ಅತ್ತ ತಿರುಗಿದರು. ಆತ್ಮದರ್ಶನವಾದಂತಾಯಿತು. ಕ್ಯಾಮರಾದವ ತನ್ನ ಕ್ಯಾಮರಾವನ್ನು ಪ್ರೇಕ್ಷಕರತ್ತ ತಿರುಗಿಸಿ ಇಟ್ಟು ಕುಳಿತುಬಿಟ್ಟಿದ್ದ! ಈ ಮಧ್ಯೆ ನಗೆ ಭಾಷಣಿಸುತ್ತಿದ್ದವರು ಹಠಾತ್ತನೆ ಮೌನವಾಗಿ ಬಿಟ್ಟರು. ಮಾತಿಲ್ಲ ಕಥೆಯಿಲ್ಲ. ಮಾತು ಮರೆತ ನಟನಂತೆ ನೋಡುತ್ತಾ ನಿಂತು ಬಿಟ್ಟರು!

''ಭಾಷಣ ನಿಂತು ಹೋಯ್ತು. ಏನಾಯ್ತು?''

''ಅಯ್ಯೋ ಪಾಪ ಈಗೆಲ್ಲಾ ಯಾರಿಗೆ ಯಾವಾಗ ಏನು ಬಡಿಯುತ್ತೆ ತಿಳಿಯೋಕ್ಕಾಗೊಲ್ಲ. ಆಸಾಮಿ ನಿಂತೇ ಇದ್ದಾರೆ. ಮಾತೂ ನಿಂತು ಹೋಗಿದೆ. ಅಲ್ನೋಡಿ ಯಾರೋ ವೇದಿಕೆಯಿಂದ ಕೆಳಗಿಳಿದು ಓಡಿದ್ರು. ಡಾಕ್ಟರನ್ನು ಕರ್ಕ್ಕೊಂಡ್ಕೊಳ್ಳೋಕ್ಕೇ ಇರ್ಬೇಕು.''

''ರೀ ಸುಮ್ನೆ ಇಲ್ಲದ್ದೆಲ್ಲಾ ಊಹೆ ಮಾಡ್ಬೇಡ್ರೀ. ಅಲ್ನೋಡಿ. ಎಲ್ರೂ ಹೊರಗೆ ನೋಡ್ತಾ ಇದ್ದಾರೆ. ಏನೋ ಗಲಾಟೆ ಶುರುವಾಗಿರ್ಬೇಕು.''

''ಇರೋದೇನು? ಇದ್ದೇ ಇರುತ್ತೆ. ಜನ ಜಂಗುಳಿ ಅಂದ್ರೆ ಪಿಕ್ ಪಾಕೆಟ್‌ಗಳು ಕಾಯ್ತಾ ಇರ್ತಾರೆ''

''ಪಿಕ್ಕೂ ಇಲ್ಲ ಪಾಕೆಟ್ಟೂ ಇಲ್ಲ. ಇಂತಹ ಸಮಾರಂಭ ಅಂದ್ರೆ ಹೆಣ್ಣು ಮಕ್ಕಳು ಚೆನ್ನಾಗಿ ಅಲಂಕಾರ ಮಾಡ್ಕೊಂಡು ಬಂದಿರ್ತಾರೆ. ಪೋಕರಿ ಹುಡುಗ್ರು ಚುಡಾಯಿಸಿರಬೇಕು. ಅದಕ್ಕೇ ಗಲಾಟೆ ಇರ್ಬೇಕು.''

ಇಷ್ಟೆಲ್ಲಾ ಊಹಾಪೋಹದ ನಡುವೆ ಮುಖ್ಯಮಂತ್ರಿಗಳು ತಮ್ಮ ಪತ್ನಿಯೊಡನೆ ಒಳಗಡಿ ಇರಿಸಿದರು. ಈಗ ಟಿ.ವಿ.ಯ ಕ್ಯಾಮರಾದವ ಅವರತ್ತ ಕ್ಯಾಮರಾ ತಿರುಗಿಸಿ ಇಟ್ಟುಬಿಟ್ಟ.


ಪಾಪತ್ತೆ ಮಾವಯ್ಯ ನಿಲ್ಲಲಾಗದೆ ಹೊರಬಂದು ಎಲ್ಲಿಯೋ ಮೂಲೆಯಲ್ಲಿ ಕುಳಿತು ಧ್ವನಿವರ್ಧಕ ಹೊರಹಾಕುತ್ತಿದ್ದ ನಗೆ ಬಾಣಗಳನ್ನು ಆನಂದಿಸಿದರು. ಸಂಜೆ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಪಾಪತ್ತೆ ಸುಸ್ತಾದಂತಿದ್ದರು.

''ಯಾಕೆ ಒಂಥರಾ ಇದ್ದೀ? ಮೈ ಚನ್ನಿಲ್ವೇ?''

''ನಕ್ಕೂ ನಕ್ಕೂ ಹೊಟ್ಟೆ ಹಿಡ್ಕೊಂಡಿದೆ. ನೆಟ್ಟಗೆ ನಿಲ್ಲೋಕ್ಕೆ ಆಗ್ತಾ ಇಲ್ಲ. ಹೀಗೆ ನಕ್ಕು ಯಾವ ಯುಗವಾಗಿತ್ತೋ? ಇನ್ನು ಮತ್ತೆ ಹೀಗೆ ನಗೋಕ್ಕೆ ಇನ್ನೆಷ್ಟು ದಿನ ಕಾಯ್ಬೇಕೋ?''

''ಹೆಚ್ಚೇನೂ ಇಲ್ಲ. ಕೇವಲ ಮುನ್ನೂರ ಅರವತ್ತೈದೇ ದಿನ'' ಎಂದರು ಮಾವಯ್ಯ.

★★★



ಸೈಕಾಲಜ್ಜಿಯೂ ಹಾಗೂ ಸ್ಟೈನ್ಲೆಸ್ ಸ್ಟೀಲೂ

– ಇಂದಿರ ಮೂರ್ತಿ

ಫಳ ಫಳ ಹೊಳೆಯುತ್ತಿದ್ದ ಸ್ಟೈನ್ಲೆಸ್ ಸ್ಟೀಲ್ ತಟ್ಟೆ ಮುಂದೆ ಊಟಕ್ಕೆ ಹಾಜರಾದ ಮೊಮ್ಮಗಳನ್ನ ಕಾಡಿತ್ತು ಈ ಪ್ರಶ್ನೆ.

''ಅಜ್ಜಿ ನೀವು ಸಣ್ಣವರಿದ್ದಾಗ ಊಟಕ್ಕೆ ಎಂಥಾ ತಟ್ಟೆ ಇತ್ತು?''

''ಅದೂ ಒಂದು ಕಾಲ. ಮೊದಲು ಎಲೆ, ಆಮೇಲೆ ಬಂತು ಅಲ್ಯೂಮಿನಿಯಂ ತಟ್ಟೆ''

''ಹೋಗ್ಲಿ ಬಿಡಿ ತಟ್ಟೆ ಯಾವುದಾದರೇನು - ಇದೇ ಸಾರು ಅನ್ನ ತಾನೇ ನಿಮ್ಗೂ ಇದ್ದದ್ದು''

ಅಜ್ಜಿಗೂ ಅದರರ್ಥ ಹೊಳೀತು. ಪಾನಿಪೂರಿ, ಪರೋಟ, ಪಿಟ್ಜಾ ಇಲ್ಲದಿದ್ದ ಮೇಲೆ ಎಲೆ ಆದ್ರೇನು ಬೆಳ್ಳಿ ತಟ್ಟೆ ಆದ್ರೇನೂ ಅಂತ.

''ಅಂಗಡಿಯಿಂದ ಸಾಮಾನು ತರಕ್ಕೆ ಬ್ಯಾಗೇ ಇರಲಿಲ್ಲ, ತಾತ ಪಂಚೇಲಿ ಸಾಮಾನು ಕಟ್ಟಿಸಿಕೊಂಡು ಬರಬೇಕಾಗಿತ್ತು ಅಂತ ಹೇಳಿದ್ರಲ್ಲಾ ಎಲೆ ಹೆಣೆಯೋ ಹಾಗೆ ಪಂಚೆ ಕತ್ತರಿಸಿ ಹೊಲಿದು ಬ್ಯಾಗ್ ಮಾಡಲಿಕ್ಕೆ ತಿಳೀಲಿಲ್ವಾ ನಿಮಗೆ?''

ಅಜ್ಜಿ ತಮಗಾದ ಕಸಿವಿಸಿ ತೋರಿಸದೇ, ''ಅಡಿಗೆ ಮಾಡಕ್ಕೆ ಈ ಸ್ಟೈನ್ಲೆಸ್ ಸ್ಟೀಲಿಂದ ಎಷ್ಟು ಅನುಕೂಲ ಆಗಿದೆ ನೋಡು'' ಅಂದು ಸ್ಟೈನ್ಲೆಸ್ ಸ್ಟೀಲ್ ಅಂಗ್ಡಿಯೇ ಅನ್ನುವಂತಿದ್ದ ಅಡುಗೆ ಮನೆ ಕಡೆ ದೃಷ್ಟಿ ಹಾಯಿಸಿದರು.

''ಮನೇಲಿ ಮಾತ್ರ ಅಲ್ಲ ಅಜ್ಜಿ. ಹಾಲಿನ ಡೈರೀಲಿ, ಹಣ್ಣಿನ ರಸ, ಟೊಮ್ಯಾಟೊ ಕೆಚಪ್, ಉಪ್ಪಿನಕಾಯಿ ಇತ್ಯಾದಿ ಮಾಡೋರಿಗೆಲ್ಲ ವರದಾನ ಆಗಿದೆ. ಅದಿರ್ಲಿ, ಅಲ್ಲಿರೋ ಕಬ್ಬಿಣದ ಕುರ್ಚಿಗೂ ಈ ತಟ್ಟೇಗೂ ಹೆಚ್ಚೇನೂ ವ್ಯತ್ಯಾಸ ಇಲ್ಲ ಗೊತ್ತೇನು?''

''ಕಬ್ಬಿಣದ ಕುರ್ಚಿಗೆ ಬಣ್ಣ ಮೆತ್ತಿದ್ರೂ, ನೋಡು ಹೇಗೆ ಅಲ್ಲಲ್ಲೇ ತುಕ್ಕಾಗಿದೆ. ತಟ್ಟೆ ನೋಡು ಹೇಗೆ ಹೊಳೆಯುತ್ತೆ. ಗಾಜನ್ನ ವಜ್ರಕ್ಕೆ ಹೋಲಿಸಿದಂತಾಯ್ತು ಬಿಡು ನೀ ಹೇಳೋದು.''

''ಅದೇ ಸ್ವಾರಸ್ಯ ನೋಡು. ಎರಡೂ ಕಬ್ಬಿಣದಿಂದಲೇ ಆಗಿದೆ. ಶುದ್ಧವಾದ ಕಬ್ಬಿಣ ಮೃದುವಾಗಿದ್ದು ಅದನ್ನ ಗಟ್ಟಿ ಮಾಡಿ ಅದಕ್ಕೆ ಬೇಕಾದ ಆಕಾರ ಕೊಡ್ಬೇಕು. ಗಟ್ಟಿ ಮಾಡಿದ ಕಬ್ಬಿಣಕ್ಕೆ ತುಕ್ಕು ಹಿಡಿಯದಂತೆ ಮಾಡಿದ್ರೆ ಅದಕ್ಕೆ ಹೊಳಪೂ ಬಂದ ಹಾಗೇ ನೋಡು.''

''ಪರಿಶುದ್ಧವಾದ ಮನಸ್ಸೂ ಹಾಗೇ - ಬಹಳ ಕೋಮಲ. ಅದನ್ನೂ ಗಟ್ಟಿ ಮಾಡಬಿಟ್ಟರೆ, ಸ್ವಲ್ಪ ಕಷ್ಟ ಬಂದ್ರೂ ಸಹಿಸ್ಟೇ ಬಗ್ಗಿ ಬಾಡಿ ಹೋಗತ್ತೆ ನೋಡು.''

''ಮನಸ್ಸಿನ ವಿಷ್ಯ ನಂಗೊತ್ತಿಲ್ಲ. ಇಂಗಾಲ ಸೇರಿಸಿ ಕಬ್ಬಿಣಾನ ಗಟ್ಟಿ ಮಾಡೋದು ಅಂತ ಗೊತ್ತು.''

''ಕೊಂಚ ಸ್ವಾರ್ಥ ಸೇರಿಸಿದ್ರೆ ಸಾಕಲ್ವಾ ಮನಸ್ಸನ್ನ ಗಟ್ಟಿ ಮಾಡೊಕ್ಕೆ''

''ಅದೂ ಒಳ್ಳೇ ಪಾಯಿಂಟೇ ಅಜ್ಜಿ. ಆದರೆ ಈ ಉಕ್ಕಿಗೆ ಪೈಂಟ್ ಬಳೀದೇ ಇದ್ರೆ ಉಪಯೋಗ ಇಲ್ಲಾ. ನೀರು ಬಿದ್ರೆ ತುಕ್ಕು ಹಿಡಿದು ಹಾಳೇ ಆಗುತ್ತೆ? ಮನಸ್ಸಿಗೆ ಯಾವ ಪೇಂಟ್ಕೊಡ್ತೀಯಾ ಹೇಳೀಗ?''

''ದೇವ್ರು ದಿಂಡ್ರು, ಪೂಜೆ ಪುನಸ್ಕಾರ ಎಲ್ಲ ಮಾಡೋದು ಅದಕ್ಕೇ, ಮನಸ್ಸು ಕೆಡದಂತಿಡಕ್ಕೆ ಅಂತಾನೇ ಎಲ್ಲಾ ಹೇಳೋದು.''

''ಅದೂ ಸರೀನೇ ಒಂದು ರೀತೀಲಿ ಅನ್ನು. ಈಗ ಹೇಳು ನೋಡೋಣ. ತುಕ್ಕಿಗೆ, ಕೊಂಚ ಕ್ರೋಮಿಯಂ ಬೆರ್ಸಿದಾಗ ಸ್ಟೈನ್ಲೆಸ್ ಸ್ಟೀಲ್ ಆಗುತ್ತೆ ಅದು. ಇದ್ರಿಂದ ಒಂದು ಹೊಸ ಕವಚ ಉಕ್ಕಿಗೆ ಸಿಗುತ್ತೆ ನೋಡು. ಇದು ತುಂಬಾ ತೆಳೂವಾದರೂ ಅದ್ನ ಭೇದಿಸೋದು ಸುಲಭ ಅಲ್ಲ. ಏನಾದ್ರೂ ಕಾರಣಕ್ಕೆ ಇದು ಹಾಳಾದ್ರೂ ತಕ್ಷಣ ಅದೇ ಜಾಗದಲ್ಲಿ ಇನ್ನೊಂದು ಕವಚ ಸೃಷ್ಟಿ ಆಗುತ್ತೆ. ವಾತಾವರಣದ ಗಾಳಿಯಿಂದ್ಲೇ. ಈ ಕವಚಾನೇ ಈ ತಟ್ಟೆ ಹೊಳ್ಪಿನ್ ಹಿಂದಿನ ಗುಟ್ಟು. ಮನಸ್ಸಿಗೆ ಈ ತರಹ ಕವಚ ಹೇಗೆ ಹೊದ್ಸಿಸ್ತೀ ಹೇಳೀಗ?''

''ಹೊರ್ಗೆ ಆಸಕ್ತಿ ಒಳ್ಗೆ ವಿರಕ್ತಿ ಅನ್ನೋ ಅನಾಸಕ್ತಿಯಾಗಾನೇ ಮನಸ್ಸಿನ ಕವಚ ಅಲ್ವಾ. ಹೀಗಿದ್ದಾಗ ಏನಾದರೂ ಆಗಲಿ ನಾವು ಮನಸ್ಸು ಕೆಡದಂತೆ ಇಟ್ಕೊಳ್ಳಬಹುದು ಅಲ್ವಾ? ಯೋಚ್ನೇ ಮಾಡಿ ನೋಡು. ಹೇಳಿದಷ್ಟು ಸುಲಭ ಅಲ್ಲ ಇದು ಮಾಡೋದು. ಈ ಕವಚದಲ್ಲಿ ಬಿರುಕು ಆಗೋದು ತುಂಬ ಸುಲಭ. ಆಗ ತುಕ್ಕು ಹಿಡಿಯೋದೂ ಗ್ಯಾರಂಟಿ ಮನಸ್ಸಿಗೆ.''

''ಸರಿಯಾಗಿ ಹೇಳಿದೆ ಅಜ್ಜಿ. ಇಲ್ಲಿರೋ ಸ್ಟೈನ್ಲೆಸ್ ಸ್ಟೀಲ್ ಜಗ್ ನೋಡು. ಅದ್ರ ಹ್ಯಾಂಡ್ಲ್ ಹಾಕೋವಾಗ ಕಾಯಿಸಿ, ಬಗ್ಗಿಸಿ ಎಲ್ಲ ಮಾಡಿದಾರೆ ನೋಡು. ಅದೇ ಇದ್ರ ವೀಕ್ ಪಾಯಿಂಟ್. ಅಲ್ಲಿ ತುಕ್ಕು ಹಿಡಿಯೋದು ಸುಲಭ. ಅಜ್ಜಿ ನೀನೇನು ಸಾಮಾನ್ಯ ಅಜ್ಜಿ ಅಲ್ಲ, ಸೈಕಾಲಜ್ಜಿನೇ ನೋಡು. ಮೈಂಡ್ ಮೆಟಲ್ ಒಂದೇ ನಾಣ್ಯದ ಬೇರೆ ಬೇರೆ ಮುಖಗ್ಳೂಂತ ಚೆನ್ನಾಗಿ ಹೇಳ್ದೆ. ಒಳ್ಳೇ ಫಿಲಾಸಫಿ ನಿಂದು. ಒಂದು ಥೀಸಿಸ್ ಇದರ ಮೇಲೇ ಬರೆದು ಪಿಹೆಚ್ಡಿ ತೊಗೊ. ಬರ್ತೀನಿ ನಾನು ಲೇಟಾಯ್ತು.''

★★★

ಗುರುತ್ವವಿಲ್ಲದ ಗೃಹಸ್ಥ

- ವೈ.ಎನ್. ಗುಂಡೂರಾವ್

(ಗುರುತ್ವಾಕರ್ಷಣೆ ಕಳೆದುಕೊಂಡು ಅಂತರಿಕ್ಷದಲ್ಲೊಂದು ಜೋಡಿ ಮದುವೆಯಾದರೆಂಬ ಸುದ್ದಿಯನ್ನು ಓದಿದ ನಂತರ)

ಸ್ವರ್ಗದಲ್ಲಿ ಮದುವೆಗಳು ನಿಷ್ಕರ್ಷೆಯಾಗಿಬಿಟ್ಟಿರುತ್ತದಂತೆ. ಅದಕ್ಕೆ ಹೇಳುವುದು - "Marriage are made in heaven" ಹಾಗಾದರೆ ಪುನಃ ಲಗ್ನಪತ್ರಿಕೆ ಯಾ ಎಂಗೇಜ್‌ಮೆಂಟ್ ಏಕೆ? ಬೇಕಾಗಿಲ್ಲ. ಅದಕ್ಕೆ ದಿಢೀರನೆ ಅಮೇರಿಕದಿಂದ ಬಂದ ಗಂಡುಗಳಿಗೆ ಇದು ಚೆನ್ನಾಗಿ ಗೊತ್ತು. ಸ್ವರ್ಗದಲ್ಲಿ ನಿಷ್ಕರ್ಷೆಯಾಗಿರುವುದರಿಂದ ಇಲ್ಲೇನಿದ್ದರೂ ನೇರವಾಗಿ ಛತ್ರ ನೋಡಿ ಮದುವೆ ಮಾಡುವುದೇ. ಅದಕ್ಕೂ ಕಾಲಾವಕಾಶವಿಲ್ಲದಿದ್ದರೆ ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ರುಜು ಹಾಕಿದರಾಯ್ತು. ಆದರೆ ಅಮೆರಿಕದ ಗಂಡಿಗೆ ಈ 'ರುಜು' ಮದುವೆ ಕಡ್ಡಾಯ ಬೇಕೇ ಬೇಕೆನ್ನಿ - ವಧುವಿನ ವೀಸಾ, ಪಾಸ್ಪೋರ್ಟ್‌ಗೆ.

ಇದು ದಿಢೀರ್ ಮದುವೆಯ ಕಥೆಯಾದರೆ ಕೆಲವರಿಗೆ ಖಯಾಲಿ, ಆಕಾಶಯಾನದಲ್ಲಿ, ಹಡಗಿನಲ್ಲಿ, ಸಬ್‌ಮೆರಿನ್‌ನಲ್ಲಿ ಹೀಗೆ ನೀರಿನಲ್ಲಿ ನೀರೊಳಗೆ, ಉಪಗ್ರಹಗಳಲ್ಲಿ... ಹೀಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಮದುವೆಯಾಗುವುದು ಅವರವರ 'ಧನ' ಶಕ್ತಿಯ ಮೇಲೆ ನಿಂತಿದೆ.

ಇದರ ಜೊತೆಗೆ ಇತ್ತೀಚೆಗೆ ಆದ ಮದುವೆ ಎಂದರೆ ಅತ್ತ ಆಕಾಶವೂ ಅಲ್ಲದೆ ಇತ್ತ ಭೂಮಿಯೂ ಅಲ್ಲದೆ ತ್ರಿಶಂಕು ಸ್ಥಿತಿ ತಲುಪಿ ಅಕ್ಷರಶ ಇದು ತ್ರಿಶಂಕು ಸ್ಥಿತಿಯೇ! ಏಕೆಂದರೆ ಗುರುತ್ವ ಕಳೆದುಕೊಂಡ ಜೋಡಿಯೊಂದು ಮದುವೆಯಾಯಿತೆಂದರೆ - ಇದು ಅದೆಂತಹ ಮದುವೆಯೋ? ಮದುವೆ ಮಾಡಿಕೊಂಡರೂ ಹುಡುಗ - ಹುಡುಗಿ, ಬೀಗರು - ಬೀಗಿತ್ತಿಯರಿಗೆ ಕೊಂಚವಾದ್ರೂ ತೂಕ ಬೇಡವೇನ್ರಿ... ಇದು ಮದುವೆ ಹೊಂದಿಸುವಾತ ಕೇಳುವ ಪ್ರಶ್ನೆ. ತೂಕವೇ ಇಲ್ಲದ ಮೇಲೆ... ಭಾರರಾಹಿತ್ಯ ಭಾರ್ಯೆ ಕಟ್ಕೊಂಡು ಅದೇನ್ ಯೇಗ್‌ತಾನೋ... ದೇವರಿಗೇ ಗೊತ್ತು.

ಹಿಂದಿನ ಕಾಲದಲ್ಲಿ ಅಂದ್ರ ವಧೂ-ವರರನ್ನು ಎಣ್ಣೆ ಶಾಸ್ತ್ರಕ್ಕೆ ಕರೆಯುವ ಹಾಡು

ಹೊಸ ವೀಳೆಯವನು ಕೊಡುತಾರತಿಯ।ನೆತ್ತಿ।ಮೇಲಾಗಿಹ.

ಸಂಪಿಗೆ ಎಣ್ಣೆಯ ಶ್ರೀ।ಲೋಲನ ತಲೆಯೊಳ್ ಸವರಿದರು॥

ಈಗ ಸಂಪಿಗೆ ಎಣ್ಣೆ ಸವರದಿದ್ದರೂ ಸನ್‌ಫ್ಲವರ್ ಎಣ್ಣೇನಾದ್ರೂ ಸವರೋದು ಬೇಡ್ವೇ?

ನಂತರ ವರಪೂಜೆ -

ಹೀರ ಹಾರ ವರಮಣಿ ಖಚಿತ।ಕೋ।ಟೀ ರಾಂಗ

ದಾಂಗುಲೀಯಕ ರತ್ನ । ಹೀರ ಚಾರು ಕುಂಡಲ ಕಂಕಣಗಳನು।

ಕೊಡಲು ಧಾರುಣಿ ದೇವಿ ಕುಂಕುಮ ವಿಡಲು॥

ಎಂದೆಲ್ಲಾ ಹೇಳಿಕೊಳ್ಳುವುದರಲ್ಲಿ ಎಂಥ ಅರ್ಥವಿದೆ, ಆನಂದವಿದೆ. ನಂತರ ಲಗ್ನ - ಸಪ್ತಪದಿ - ಕನ್ಯಾದಾನ - ಉರುಟಣೆಯ ಚೆಂಡಾಡುವ ಕಾಲದಲ್ಲಿ

ಚೆಂಡನಾಡಿದನಾ ಖಂಡಲವಂದಿತನು।

ಪುಂಡರೀಕಾಕ್ಷನು ಕುಂಡಾಲವರದನು॥

ನಲ್ಲೆಯ ಗಲ್ಲವ ಮೆಲ್ಲಗೆ ಮುಟ್ಟುತ।....

ವರನಿಗೆ ಎಂಥ ಅಮೋದ - ಪ್ರಮೋದ, ಪ್ರೀತಿ ಹುಟ್ಟುವ ಸಮಯವಲ್ಲವೇ ಇದು. ಆದರೆ ಹೀಗೆ ಕನಸು ಕಾಣುವ ಹುಡುಗನಿಗೆ ಛೇಡಿಸಲು ವಧುವು -

ಎಲ್ಲಿ ದೊರೆತನೋ । ಎನಗೆ ನಲ್ಲನೀತನು।

ಮೆಳ್ಳಗಣ್ಣಿ। ಡೊಳ್ಳು ಹೊಟ್ಟೆಯ।

ಹಲ್ಲು ಕಿರುಕ। ಜೊಲ್ಲು ಸುರಕ॥

ಎಂದರೆ ಗಂಡಿಗೆ ಹೇಗಾಗಬೇಡ?

ಒಂದು ಸಾರೆ ಮದುಮಗನನ್ನು ವ್ಯಾನಿನಲ್ಲಿ ಕರೆದೊಯ್ಯುತ್ತಿದ್ದರು. ರಾತ್ರಿ ವೇಳೆ ನೈಸರ್ಗಿಕ ಕರೆಗಾಗಿ ವ್ಯಾನು ನಿಲ್ಲಿಸಿದರು. ಕೆಲವರು ಇಳಿದರು. ಮದುವೆಯ ಹುಡುಗನೂ ಇಳಿದ. ಆದರೆ ಕತ್ತಲೆಯಲ್ಲಿ ಯಾರು ಹತ್ತಿದರು ಯಾರು ಇಳಿದರು ಎನ್ನುವುದನ್ನು ನೋಡದೆ, ಹುಡುಗನನ್ನೇ ಬಿಟ್ಟು ವ್ಯಾನು ಓಡಿಸಿದರಂತೆ. ಮದುವೆಯ ಮನೆ ತಲುಪಿದಾಗ ಹುಡುಗನೇ ಇಲ್ಲ. ಅಂದಿನಿಂದಲೇ ಗಾದೆ ಮಾತು ಬಂದದ್ದು 'ಮದುಮಗನ ಬಿಟ್ಟು ಮದುವೆಗೆ ಹೋದರು' ಅಂತ.

ಇನ್ನೊಂದು ಸಾರೆ ನಾವು ಐದಾರು ಜನ ಸ್ನೇಹಿತರು ಮದುವೆಗೆಂದು ಹೋದೆವು. ಗಂಡಿನ ಕಡೆಯವರಿಗೂ ಹೆಣ್ಣಿನ ಕಡೆಯವರಿಗೂ ಯಾವುದೋ ವಿಷಯಕ್ಕೆ ಜಗಳ ಹತ್ತಿಕೊಂಡಿತು. ಊಟ ಬಡಿಸಲು ಪ್ರಾರಂಭಿಸಿದ್ದರು ಅಷ್ಟೆ, ಬಡಿಸುವುದನ್ನು ನಿಲ್ಲಿಸಿದ ಅಡಿಗೆಯವರು ಜಗಳದ ತಮಾಷೆ ನೋಡಲು ಪ್ರಾರಂಭಿಸಿದರು. ಕೆಲವರಿಗೆ ಇದು ಭಾರಿ ಮೋಜಿನದಾಯಿತು, ಬಡಿಸ್ರೀ ಊಟನಾದ್ರೂ ಮುಗಿಸುತ್ತೇವೆಂದರೆ, ಯಜಮಾನ್ರು ಹೇಳಬೇಕ್ರೀ... ಎಂದುಬಿಟ್ಟ ಅಡಿಗೆ ಭಟ್ಟ, ಕಡೆಗೆ ಬೇಕರಿಯೇ ಗತಿಯಾಯಿತು ನಮ್ಮ ಐವರು ಸ್ನೇಹಿತರಿಗೆ.

ಆ ಭೂಮದ ಊಟದ ನೋಟವೇ ನೋಟ. ಅಪ್ಪಿ ಕರಿದ ಪಾಯಸ, ಲಾಡು, ಮಂಡಿಗೆ, ಗರಗುಫೇಣಿ, ಚಿರೋಟಿ, ಚಿಲುಮುರಿಯ ಲಡ್ಡು, ಸುರುಳಿ ಹೋಳಿಗೆ, ಒಂದೇ, ಎರಡೇ.... ಇದನ್ನೆಲ್ಲಾ ನೋಡಬೇಕ್ರೀ... ನೋಡೋದೆಲ್ಲಿ ಕೇಳೋಕ್ಕು ಇಲ್ಲ... ನಂತರ ವರ ಊಟವಾದ ಮೇಲೆ ಆಪೋಷನ ತೆಗೆದುಕೊಂಡು ಕೈಗೆ ನೀರು ಹಾಕಲು ಬಂದ ಅತ್ತೆಯ ಕೈ ಹಿಡಿದು ಮಾವನ ಹೆಸರು ಹೇಳಿಸೋದ್ರಲ್ಲಿದ್ದರೋ ಮಜಾ...

ಇಂಥ ಘಟನೆಗಳನ್ನು ಮೆಲಗು ಹಾಕ್ತಾಯಿದ್ದರೆ ಮದುವೆ ಅಂದ್ರೆ ಅದು ಎನ್ನಿಸಿಬಿಡುತ್ತೆ ಅಲ್ವಾ.

ನಂತರದ ಸರದಿ ಹೆಣ್ಣೊಪ್ಪಿಸುವ ಹಾಡು

ಬಾಲೆ ನಮಿಸು ನಿಮ್ಮತ್ತೆಯ। ಕಾಲಿಗೆಂದು ಹೇಳಿ ತೊಡೆಯ।ಮೇ

ಲೆ ಕೂಡಿಸುತ್ತಂಗೈಯೊಳ್। ಹಾಲು ಹಣ್ಣುಗಳನ್ನು ಹಾಕಿ।

ಶಾಸ್ತ್ರಕ್ಕಾದರೂ ಅತ್ತೆ ತನ್ನ ತೊಡೆಯ ಮೇಲೆ ಮಜಭೂತಾದ ಸೊಸೆಯನ್ನು ಕೂಡಿಸಿ ಕೊಳ್ಳುವ ಮಜಭೂತಾದ ಎಲ್ಲಿ... ಉಫ್ ಎಂದರೆ ಹಾರಿಹೋಗುವ ತೆಳು ನಡುವಿನ ಈಗಿನ ಬಾಲೆಯರು...

ಹೀಗೆ ಊರಿಗೆಲ್ಲಾ ಸಂಭ್ರಮ ತರುವ ಮದುವೆಯನ್ನು ಈ ಭಾರ ರಹಿತ ಮದುವೆಗಳಿಂದ ನಿವಾಳಿಸಿ ಎಸೆಯಬೇಕು. ದಿನಕರ ದೇಸಾಯಿಯವರ ಚೌಪದಿಯಂತೆ,

ಮದುವೆ ಮಂಟಪದೊಳಗೆ ಕುಳಿತುಕೊಂಡಾಗ

ನೂರಾರು ಜನ ಬಂದು ವಹಿಸುವರು ಭಾಗ

ಪೂರ್ಣ ಮುಗಿದೊಡನೆ ಭಟ್ಟರ ಮಂತ್ರ ವಿದ್ಯೆ

ಸಂಸಾರ ಸಾಗರದ ನೀರೊಳಗೆ ಬಿದ್ದೆ

ಭವ ಸಾಗರದಲ್ಲಿ ಈಸಬೇಕು ಇದ್ದು ಜೈಸಬೇಕು.... ಎಂದು ಸುಮ್ಮನೆ ಹಾಡಿದ್ದಾರೆಯೇ ದಾಸರು?

ಇದ್ಯಾವುದೂ ಇಲ್ಲದೆ ಹಗುರಾಗಿ ಹಾರಾಡಿದರೆ ಏನು ಬಂತು?

ಹಾದಿಯಲ್ಲಿ ಕೇಳಿಸಿದ್ದು:

''ಶಂಕರ, ರಾಮಾನುಜ, ಮಧ್ವ, ಅಂತ ಹಾಡಿದರೆ, ಸಾಲಿನಿಂದ ಸಾಲಿಗೆ ಪ್ರಾಸಾನೇ ಸರಿಹೋಗುಲ್ಲವಲ್ರೀ''

ರಾ.ಶಿ. ಅವರ ಜೊತೆ....

– ಓಂ ಪ್ರಕಾಶ್

ನಾವೆಲ್ಲ ಚಿಕ್ಕವರು. ಅಪ್ಪ Three Cashes ಸಿಗರೇಟ್ ಭಕ್ತರಾಗಿದ್ದರು. ಹಸಿರು ಬಣ್ಣದ ಒಂದು ಟಿನ್‌ನಲ್ಲಿ 60 ಸಿಗರೇಟುಗಳು! ಖಾಲಿ ಟಿನ್‌ನಲ್ಲಿ ಕೇರಂ ಪಾನ್‌ಗಳನ್ನ ಶೇಖರಿಸಿ ಇಟ್ಟಿದ್ದೆ. ಒಂದು ಸಂಜೆ ಅಪ್ಪ ನಮ್ಮ ರೂಮಿಗೆ ಬಂದು 'ಇದೇನೋ?' ಅಂದರು ನಾನು 'ಸಿಗರೇಟ್ ಟಿನ್' ಅಂದೆ. 'ಅದರಲ್ಲಿ ಕೇರಂ ಪಾನ್‌ಗಳು ಇವೆ' ಅಂತಲೂ ಸೇರಿಸಿದೆ. ಅವರು ನಕ್ಕರು. 'ಅಲ್ಲ ಕಣೋ, ಒಂದು ಮನೇಲಿ ಸಿಗರೇಟ್ ಸೇದೋ fool ಒಬ್ಬನೇ ಇರಬೇಕು! ಅದಕ್ಕೇ ಗಾಬರಿ ಆಯ್ತು!!'

★★★

ಒಂದು ದಿನ ಬೆಳಿಗ್ಗೆ ಅಪ್ಪನ ಜತೆ ಕಾರಿನಲ್ಲಿ ಹೋಗ್ತಾ ಇದ್ದೆ. ಅವರೇ ಡ್ರೈವ್ ಮಾಡ್ತಿದ್ದರು. ಮಲ್ಲೇಶ್ವರಂ ಸರ್ಕಲ್‌ನಲ್ಲಿ Traffic ಪೋಲೀಸ್ ಒಬ್ಬ ಕೈ ಬೀಸಿ, ನಮಗೆ ಸಿಗ್ನಲ್ ಕೊಟ್ಟ. ನನಗೆ ಮಹದಾಶ್ಚರ್ಯ! 'ಅಪ್ಪ, ಅವನಿಗೆ ನಾವು ಯಾವ ಕಡೆ ಹೋಗಬೇಕು ಅಂತ ಹೇಗೆ ಗೊತ್ತಾಗುತ್ತೆ?' ಅಂತ (ಮುಗ್ಧ) ಪ್ರಶ್ನೆ ಕೇಳಿದೆ. ರಾ.ಶಿ. ನಗುತ್ತ ಹೇಳಿದರು. 'ಇಲ್ಲ ಕಣೋ, ಅವನಿಗೆ ಗೊತ್ತಿರುಲ್ಲ! ನಾನು ಡ್ರೈವ್ ಮಾಡೋ ಶೈಲಿ ನೋಡಿ, ಬೇಗ ಇವನು ಸರ್ಕಲ್ ದಾಟಲಿ ಅಂತ ಕೈಬೀಸಿದ ಅಷ್ಟೆ!''

★★★

ಅಪ್ಪನಿಗೆ ಶಿಸ್ತು, Time Sense ಬಹಳ ಪ್ರಮುಖ ಅಂಶಗಳು. ಯಾವುದೇ ಕೆಲಸ ಮಾಡಿದರೂ ನಂ ಕೈಲಿ ಎಷ್ಟು efficient ಆಗಿ ಮಾಡುಕ್ಕಾಗುತ್ತೋ ಪ್ರಯತ್ನ ಪಡಬೇಕು. ನಮ್ಮ ಅಕ್ಕನ ಮದುವೇಲಿ ಔತಣ ನಡೀತಾ ಇದೆ. ಚಿರೋಟಿ ಬರೋದು ಒಂದು ನಿಮಿಷ ತಡ ಆಯ್ತು. ಅಪ್ಪನಿಗೆ ದೂರ್ವಾಸನಂತೆ ಮುಖ ಕೆಂಪೇರಿತು! ಚಿರೋಟಿ ಬರಲಿ ಅಂತ ಗಟ್ಟಿ ಧ್ವನಿಯಲ್ಲಿ ಹೇಳಿದರು. ಸರಿ, ಎಲ್ಲರಿಗೂ ಚಿರೋಟಿ ಬಡಿಸಿದರು. ಬೂರಾ ಸಕ್ಕರೆ ಬರಲೇ ಇಲ್ಲ. ಅಡಿಗೆಯವರನ್ನೇ ತಿನ್ನುವಂತೆ ನೋಡುತ್ತಿದ್ದ ಅಪ್ಪನ್ನ ನೋಡಿ ಅವರು ಹೆದರಿದರು. ಬೇಗ ಸಕ್ಕರೆ ಬಡಿಸಿದರು. ಊಟವೆಲ್ಲ ಆದ ಮೇಲೆ ನಮಗೆ ಗೊತ್ತಾಯ್ತು! ಗಡಿಬಿಡಿಯಲ್ಲಿ ಉಪ್ಪು ಬಡಿಸಿದ್ದರು!!

★★★

ನನ್ನ ತಮ್ಮ ಬಚ್ಚು (ಅವನ ಹೆಸರು ರಾಮಸ್ವಾಮಿ, ಆದರೆ ನಮಗೆಲ್ಲ ಕಿರಿಯನಾದ್ದರಿಂದ ಬಚ್ಚು) ಒಂದು ಸಂಜೆ ಓದುತ್ತಾ ಕುಳಿತಿದ್ದ. ಅಪ್ಪ ಊಟ ಮುಗಿಸಿ

ಬಂದರು ಅವನ ಹಿಂದೆಯೇ ಸದ್ದು ಮಾಡದೆ ನಿಂತರು. ನಾನು, ಕುಮಾರ್ ಚಕಿತರಾಗಿ ನೋಡುತ್ತಿದ್ದೆವು. ಸುಮಾರು ಐದು ನಿಮಿಷ ಆದಮೇಲೆ ಬಚ್ಚು ಧಡಾರನೆ ಎದ್ದ! ಅಪ್ಪ ಹಿಂದೆ ನಿಂತಿದ್ದು ಅವನ Subsconscious ಮನಸಿಗೆ ಅರಿವಾಯಿತೇನೋ? ನಾವೆಲ್ಲಾ ನಕ್ಕೆವು. ಅಪ್ಪ, ನೋಡೋ, concentraction ಅಂದರೆ ಹೀಗೇ ಇರಬೇಕು! ತದೇಕ ಚಿತ್ತ ಅಂತಾರೆ ಎಂದು ನಗುತ್ತಾ ಹೇಳಿದರು. concentration ಕಮ್ಮಿ ಇದ್ದ ನಾವು ಬೆಪ್ಪರಂತೆ, ಹೆಮ್ಮೆಯಿಂದ ಬೀಗುತ್ತಿದ್ದ ಬಚ್ಚು ಕಡೆ ನೋಡುತ್ತಿದ್ದೆವು!

★★★

ಚಂದಾದಾರರಲ್ಲಿ ಒಂದು ಮನವಿ

ಮುದ್ರಣ ವೆಚ್ಚ, ಕಾಗದದ ಬೆಲೆ, ಇವೆರಡೂ ಬಹುವಾಗಿ ಏರಿರುವುದರಿಂದ ಅಪರಂಜಿ ಪತ್ರಿಕೆಯ ಚಂದಾದರಗಳನ್ನು ಈ ಕೆಳಗೆ ನಮೂದಿಸಿರುವಂತೆ ಬದಲಿಸಬೇಕಾದ್ದು ಅನಿವಾರ್ಯವಾಗಿದೆ.

ವಾರ್ಷಿಕ ಚಂದಾ: ರೂ. 100/-
(ಜನವರಿ ತಿಂಗಳ ವಿಶೇಷ ಸಂಚಿಕೆ ಸೇರಿ)
ಹತ್ತು ವರುಷಗಳ ಚಂದಾ: ರೂ.. 750/-

ಇನ್ನೊಂದು ವಿಷಯ. ಈಗಾಗಲೇ ಹತ್ತು ವರುಷಗಳ ಚಂದಾ ನೀಡಿರುವ ಮಹನೀಯರು ಹೆಚ್ಚಿಗೆ ಮೊತ್ತವಾದ ರೂ. 250/-ನ್ನು ಕಳುಹಿಸಿ ಸಹಕರಿಸಿರೆಂದು ನಮ್ರ ಬಿನ್ನಹ. ಇದು ಕೇವಲ ಒಂದು ವಿನಂತಿ. ಈ ಕುರಿತು ಬಲವಂತವೇನೂ ಇಲ್ಲ. ಮೊತ್ತವನ್ನು ಕಳುಹಿಸಿದರೆ ಅಪರಂಜಿಯ ಆರ್ಥಿಕ ಸುಭದ್ರತೆಗೆ ನಿಜಕ್ಕೂ ಒಂದು ಆಸರೆ ದೊರಕಿದಂತಾದೀತು.

ತಮ್ಮ ವಿಶ್ವಾಸಿ

ಶಿವಕುಮಾರ್

ವೈ.ಎನ್.ಕೆ. ದೋಸ್ತಿ

– ಎಸ್.ಎನ್. ಶಿವಸ್ವಾಮಿ

ವೈ.ಎನ್.ಕೆ. ನನಗಿಂತ ಐದಾರು ವರ್ಷ ಚಿಕ್ಕವರಾದರೂ ತಮ್ಮ ಮೈತ್ರಿ ಬಹಳ ಹಳೆಯದು. ನಮ್ಮದು ನಾಲ್ಕೈದು ದಶಕಗಳ ದೀರ್ಘ ಕಾಲದ ಸಹವಾಸ. ನಮ್ಮ ಪರಿಚಯವಾದಾಗ ವೈ.ಎನ್.ಕೆ. ಅವಿಭಕ್ತ ಕುಟುಂಬದ ಸದಸ್ಯರಾಗಿ ಗವೀಪುರದ ಹಳೆಯ ಮನೆಯೊಂದರಲ್ಲಿ ವಾಸವಾಗಿದ್ದರು. ಆ ಮನೆ ಇದ್ದ ಜಾಗದಲ್ಲಿ ಈಗ ''ನಿವೇದಿತಾ'' ಶಾಲೆಯ ಬಹುಮಹಡಿ ಕಟ್ಟಡವಿದೆ. ಅದೇ ಬೀದಿಯಲ್ಲಿ ನಮ್ಮ ಅಜ್ಜಿ, ಸೋದರ ಮಾವಂದಿರು ವಾಸವಾಗಿದ್ದರು. ಮದರಾಸಿನಿಂದ ಬಂದಾಗಲೆಲ್ಲ ಅವರನ್ನು ನೋಡಲು ನಾನು ಅಲ್ಲಿಗೆ ಬರುತ್ತಿದ್ದೆ. ಆಗ ವೈ.ಎನ್.ಕೆ. ''ಪ್ರಜಾವಾಣಿ''ಯ ಸಂಪಾದಕೀಯ ವಿಭಾಗದಲ್ಲಿ ಕೆಲಸಕ್ಕೆ ಸೇರಿದ್ದರು. ನಾನು ''ಸುಧಾ'' ಹಾಗೂ 'ಮಯೂರ'' ಪತ್ರಿಕೆಗಳಿಗೆ ಲೇಖನಗಳನ್ನು ತಲುಪಿಸುವುದಕ್ಕೋಸ್ಕರ ''ಪ್ರಜಾವಾಣಿ'' ನಿಲಯಕ್ಕೆ ಹೋದಾಗ ಔಪಚಾರಿಕವಾಗಿ ಟೀಎಸ್ಸಾರ್, ಜಯಶೀಲರಾವ್, ಇ.ಆರ್. ಸೇತೂರಾಮ್, ವೈ.ಎನ್.ಕೆ. ಜನಾರ್ದನ್, ಎಂ.ಪಿ. ಸಿಂಗ್ ಇವರುಗಳನ್ನೆಲ್ಲ ಭೇಟಿ ಮಾಡಿ ಬರುತ್ತಿದ್ದೆನಾದ್ದರಿಂದ ಅವರೆಲ್ಲರ ಪರಿಚಯ ನನಗಿದ್ದೇ ಇತ್ತು.

ವೈ.ಎನ್.ಕೆ.ಯವರ ಮನೆಯಲ್ಲಿ ಒಂದು ಉದ್ದದ ಕೋಣೆ ಅವರ ಬೆಡ್ - ಕಮ್ ಡ್ರಾಯಿಂಗ್ ರೂಂ ಆಗಿತ್ತು. ಲೆಕ್ಕವಿಲ್ಲದಷ್ಟು ಬಾರಿ ನಾನು ಆ ಕೋಣೆಯಲ್ಲಿ ಅವರೊಂದಿಗೆ ಕೂತು ಕಾಫಿ ತಿಂಡಿ ಸತ್ಕಾರ ಸ್ವೀಕರಿಸಿ ಮಾತುಕತೆಯಲ್ಲಿ ಮುಳುಗಿದ್ದದ್ದುಂಟು. ಅವರೂ ನನ್ನ ಹಾಗೇ ಒಬ್ಬ ಬುಕ್‌ವರ್ಮ್. ನಾವು ಓದಿದ ಪುಸ್ತಕಗಳನ್ನೆಲ್ಲಾ ಪರಸ್ಪರ ಹಂಚಿಕೊಂಡು ಅವುಗಳ ಗುಣಾವಗುಣಗಳ ವಿವೇಚನೆಗೆ ತೊಡಗುತ್ತಿದ್ದೆವು.

ಓದುವುದಲ್ಲದೆ ಬರೆಯುವ ಹವ್ಯಾಸವನ್ನೂ ನಾವು ಬೆಳೆಸಿಕೊಂಡಿದ್ದೆವು. ''ಕೊರವಂಜಿ' ಮಾಸಪತ್ರಿಕೆಗೂ ಮುಂಚೆ ಪ್ರಕಟವಾಗುತ್ತಿದ್ದ ''ಕತೆಗಾರ'' ಮಾಸಿಕದಲ್ಲಿ ನಾನು ಪಿ.ಜಿ. ವೋಡ್‌ಹೌಸ್‌ನ ''ಜೀವ್ಸ್'' ಮಾದರಿಯ ಕತೆಗಳನ್ನು ''ಜೀವರ್ಕ್'' ಎಂಬ ವ್ಯಕ್ತಿಯನ್ನು ಕುರಿತು ಹಾಸ್ಯ ಸರಣಿಯಾಗಿ ಬರೆಯುತ್ತಿದ್ದೆ. ಅದೇ ವೇಳೆಗೆ 'ಕತೆಗಾರ'ದಲ್ಲಿ ವೈ.ಎನ್.ಕೆ. ಆಗಾಗ ಕತೆಗಳನ್ನು ಬರೆಯುತ್ತಿದ್ದರು. ನಮ್ಮ ನಮ್ಮ ಕತೆಗಳನ್ನು ಓದಿ ನಾವಿಬ್ಬರೂ ತಪ್ಪದೆ ವಿಮರ್ಶೆಗೆ ಕೂರುತ್ತಿದ್ದೆವು.

ಪುಸ್ತಕಗಳ ವಿಷಯದಲ್ಲಿ ನಮ್ಮಿಬ್ಬರ ಅಭಿರುಚಿಗಳು ಒಂದೇ ಆಗಿದ್ದವು. ವೈ.ಎನ್.ಕೆ.ಗೆ. ತಾವು ಓದುವ ಪುಸ್ತಕ ಹೊಸ ತರಹದ್ದಾಗಿದ್ದರೆ ಮಿಗಿಲಾದ ತೃಪ್ತಿ. ಅಂದಿನ

ಪ್ರಸಿದ್ಧ ಲೇಖಕರ ಪುಸ್ತಕಗಳನ್ನೆಲ್ಲ ಒಂದೂ ಬಿಡದೆ ಓದಬೇಕೆಂದು ಅವರಿಗೂ ಆಸೆ, ನನಗೂ ಆಸೆ. ಆದ್ದರಿಂದ ನಾವು ಭೇಟಿಯಾದಾಗಲೆಲ್ಲ, ಹೊಸದಾಗಿ ಬಂದಿದೆಯಲ್ಲ ಈ ಪುಸ್ತಕ ಓದಿದ್ದೀರಾ, ಆ ಪುಸ್ತಕ ಓದಿದ್ದೀರಾ, ಎಂದು ವಿಚಾರಿಸಿಕೊಳ್ಳುತ್ತ, ಅವುಗಳ ಆಯ್ಕೆಯಲ್ಲಿ ನಮ್ಮ ಔಚಿತ್ಯ ಪ್ರಜ್ಞೆಯ ತುಲನೆ ಮಾಡಿಕೊಳ್ಳುತ್ತ ನಮ್ಮ ಪುಸ್ತಕ ಪ್ರಪಂಚವನ್ನು ವಿಸ್ತರಿಸಿಕೊಳ್ಳುತ್ತಿದ್ದೆವು. ಆಲ್ಡಸ್ ಹಕ್ಸ್ಲಿ, ಫಾಕ್ನರ್, ಆರ್ವೆಲ್, ಹೆಮಿಂಗ್ವೇ, ಜಾಕ್ ಲಂಡನ್, ಇಂಥ ಸಾಹಿತ್ಯ ದಿಗ್ಗಜಗಳ ಪುಸ್ತಕಗಳಲ್ಲದೆ ಲಘು ಬರಹಕ್ಕೆ ಮಾದರಿಯಾಗಿದ್ದ ಕಾನನ್ ಡಾಯ್ಲ್, ಎಡ್ಗರ್ ವಾಲೇಸ್, ಮಾಮ್, ವೋಡ್ ಹೌಸ್, ರೇಮಂಡ್ ಚಾಂಡ್ಲರ್, ಇವರುಗಳೆಲ್ಲರ ಹೊಸ ಹೊಸ ಕೃತಿಗಳು ನಮ್ಮ ಕೈಗಳನ್ನು ಅಲಂಕರಿಸಿಯೇ ಇರುತ್ತಿದ್ದವು. ಕತೆ ಕಾದಂಬರಿಗಳಷ್ಟೇ ಅಲ್ಲದೆ ನಾವು ಮಾಧ್ಯಮ ಬ್ರಹ್ಮ ಮಾರ್ಷಲ್ ಮೆಕಲೂಹನ್ ಪುಸ್ತಕಗಳಿಂದ ಹಿಡಿದು ಕಲಾವಿದ ಮಾರಿಸ್ ಷೆರಾಲಿಯರ್‌ನ ಆತ್ಮಕಥೆಯ ವರೆಗಿನ ನಾನಾ ವರ್ಗದ ಬರೆಹಗಳನ್ನು ಓದಿ ಮುಗಿಸಿದ್ದೆವು. ಉಳಿದಂತೆ ವೈ.ಎನ್.ಕೆ. ಯನ್ನು ವಿಶೇಷವಾಗಿ ಆಕರ್ಷಿಸುತ್ತಿದ್ದ ಪುಸ್ತಕಗಳೆಂದರೆ ಸೃಜನಶೀಲತೆಯುಳ್ಳ ಯಾವುದೇ ಹೊಸ ಬರೆಹಗಳು ''ಹೊಸತನ'' ವೈ.ಎನ್.ಕೆ.ಯ ಬರೆಹಗಳಲ್ಲಿಯೂ ನಾನು ಗಮನಿಸುತ್ತಿದ್ದ ಒಂದು ವೈಶಿಷ್ಟ್ಯ. ಚುಟುಕು - ತುಣುಕು ಪದ್ಯ, ಪದಪ್ರಯೋಗದಲ್ಲಿ ತಾನೇ ತಾನಾದ ಪನ್ ಬಳಕೆ, ವಿಚಾರಗಳ ಸ್ಪಷ್ಟ ಪ್ರತಿಪಾದನೆ, ಎಲ್ಲೆಲ್ಲೋ ಅಡಗಿದ್ದ ಹೊಸಬರೆಹಗಳ ಶೋಧನೆ, ವ್ಯವಸ್ಥಿತ ಚಿಂತನಾಕ್ರಮ, ಇವೆಲ್ಲ ವೈ.ಎನ್.ಕೆ.ಯ ಪತ್ರಿಕಾ ವ್ಯವಸಾಯದಲ್ಲಿನ ಅಪೂರ್ವ ಸಾಧನೆಗಳು. ಸಮಕಾಲೀನ ಪತ್ರಕರ್ತರ ಜೊತೆಗೂಡಿ ವೈ.ಎನ್.ಕೆ.ಗೆ ಕನ್ನಡ ಪತ್ರಿಕೆಗಳಲ್ಲಿನ ಇಂದಿನ ಭಾಷಾ ಶೈಲಿಯ ನಿರ್ಮಾಣ ಮಾಡಿದವರಲ್ಲಿ ಅಗ್ರಗಣ್ಯರು.

ಪುಸ್ತಕಗಳಲ್ಲಿ ಹೇಗೋ ಹಾಗೇ ರಂಗಭೂಮಿ ಚಲನಚಿತ್ರಗಳಲ್ಲೂ ಹಾಗೇ. ನಾಟಕಗಳ ಮಾತು ಎಂದರೆ ಟಿ.ಪಿ. ಕೈಲಾಸಂರ ಪ್ರಹಸನಗಳನ್ನು ಪದರಪದರವಾಗಿ ವೈ.ಎನ್.ಕೆ. ವಿಶ್ಲೇಷಿಸುತ್ತಿದ್ದರು. ಷೇಕ್ಸ್‌ಪಿಯರ್, ಷೆರಿಡಾನ್, ಷಾ, ಗಳಿಂದ ತೊಡಗಿ ಆಸ್ಕರ್‌ವೈಲ್ಡ್, ಓ ನೀಲ್, ಟೆನ್ನಿಸ್ಸೀ ವಿಲಿಯಮ್ಸ್, ಎಡ್ವರ್ಡ್ ಆಲ್ಬೀವರೆಗಿನ ಪ್ರತಿಭಾವಂತ ಪಾಶ್ಚಾತ್ಯ ನಾಟಕಕಾರರೆಲ್ಲರ ಕೃತಿಗಳನ್ನು ಅವರು ಜಾಲಾಡಿಸುತ್ತಿದ್ದರು. ಸಿನೆಮಾ ಕ್ಷೇತ್ರಕ್ಕೆ ಬಂದರೆ ಪೃಥ್ವಿರಾಜ್, ಸೈಗಾಲ್, ಶಾಂತಾ ಆಪ್ಟೆ, ಚಂದ್ರಮೋಹನ್, ಇವರಲ್ಲದೆ ಜಾನ್ ಬ್ಯಾರಿಮೋರ್, ಚಾರ್ಲ್ಸ್ ಲಾಫ್ಟನ್, ವಿವಿಯನ್ ಲೈ, ಸ್ಪೆನ್ಸರ್ ಟ್ರೇಸಿ ಮುಂತಾದ ಜನಪ್ರಿಯ ತಾರೆಯರ ಬಗ್ಗೆ ಟಿಪ್ಪಣಿಗಳನ್ನು ಕೊಡುತ್ತಿದ್ದರು. ಹಾಸ್ಯ ನಟ ನಟಿಯರ ಬಗ್ಗೆ ಅವರಿಗೆ ವಿಶೇಷ ಒಲವು. ಡಾನಿಕೇ, ಬಾಬ್‌ಹೋಪ್, ಮಾರ್ಕ್ಸ್ ಸಹೋದರರು, ಸಿಲ್‌ಬಾಲ್ ಇವರುಗಳೆಲ್ಲರ ಚಿತ್ರಗಳನ್ನು ನಾವಿಬ್ಬರೂ ನೋಡಿ ಮೆಲುಕು ಹಾಕುತ್ತಿದ್ದೆವು.

ಊಟೋಪಚಾರದ ವಿಷಯದಲ್ಲಿ ವೈ.ಎನ್.ಕೆ. ಬಹಳಷ್ಟು ಅಚ್ಚುಕಟ್ಟಾಗಿರುತ್ತಿದ್ದರು. ಅವರ ಹೊಸ ಮನೆಗೆ ನನ್ನನ್ನೂ ನನ್ನ ಶ್ರೀಮತಿಯನ್ನೂ ಊಟಕ್ಕೆ ಕರೆದು ಮಾಡಿಸಿದ ಬಿಸಿಬೇಳೆ ಹುಳಿಯನ್ನದ ರುಚಿ, ಔತಣದುದ್ದಕ್ಕೂ ತೋರಿಸಿದ ನಾಜೂಕು, ಸೌಜನ್ಯ, ಮರೆಯಲಾಗದ್ದು. ಅವರಿಗೆ ತಾವು ತಿನ್ನುವ, ಇತರರಿಗೆ ಬಡಿಸುವ ಪದಾರ್ಥಗಳೆಲ್ಲವೂ ಶುಚಿ ರುಚಿಗಳ ವಿಷಯದಲ್ಲಿ ಅದ್ವಿತೀಯವಾಗಿರಬೇಕು ಎಂಬ ಇಚ್ಛೆ. ಹಾಗೇ ಅವರು ನಮ್ಮ ಮನೆಗೆ ಬಂದಾಗಲೂ ತಿನ್ನಲು ಏನು ಕೊಟ್ಟರೂ ಅದರ ರುಚಿಯನ್ನು ಗಮನಿಸಿ ಶ್ಲಾಘಿಸಿ ನಮ್ಮಾಕೆಯನ್ನು ಪ್ರಸನ್ನಗೊಳಿಸುತ್ತಿದ್ದರು. ಅವರ ಮಿತ್ರರು ಕೂಡ ಸೇರುತ್ತಿದ್ದದ್ದು ಅವರ ಮನೆಯಲ್ಲೊಂದು ಚಿಕ್ಕ ಕೋಣೆಯಲ್ಲಿ. ಕೋಣೆ ಎಲ್ಲಾ ವಿಧದಲ್ಲೂ ಅತಿ ಶುಭ್ರ. ಎಲ್ಲರೂ ರತ್ನ ಕಂಬಳಿಯ ಮೇಲೆ ಚಕ್ಕಳ ಮಕ್ಕಳ ಹಾಕಿ ಕೂರುತ್ತಿದ್ದೆವು. ನಡುವೆ, ಮಗ್ಗಲುಗಳಲ್ಲಿ, ಸಿಗರೇಟ್ ಬೂದಿ ಬಟ್ಟಲುಗಳು, ಕೈಯೊರೆಸಲು ಕಾಗದ ಸಜ್ಜಾಗಿರುತ್ತಿದ್ದವು. ಸ್ವಲ್ಪವೇ ಏನಾದರೂ ರತ್ನ ಕಂಬಳಿಯ ಮೇಲೆ ಬಿದ್ದರೆ ಕೂಡಲೇ ತಾವೇ ಅದನ್ನು ತೆಗೆದು ಬೂದಿ ಬಟ್ಟಲಲ್ಲಿ ಹಾಕಿ ಕೈಯೊರೆಸಿಕೊಳ್ಳುತ್ತಿದ್ದರು, ಇತರರೂ ಎಚ್ಚರವಾಗಿರಲೆಂದು.

ವೈ.ಎನ್.ಕೆ. ವಾಯುವಿಹಾರಕ್ಕೆಂದು ಸಂಜೆ ಸ್ವಲ್ಪ ಬಿಡುವು ಮಾಡಿಕೊಂಡು ಎಲ್ಲಾದರೂ ಸುತ್ತಾಡಿ ಬರುತ್ತಿದ್ದರು. ನಾವು ದೂರದ ಜೆ.ಪಿ. ನಗರದಲ್ಲಿದ್ದಾಗ ಕೂಡ ಅವರು ಯಾರಾದರೂ ಸ್ನೇಹಿತರ ಜತೆಗೆ ಬಂದು ಮೂರಡಿ ರಸ್ತೆಯಲ್ಲಿ ಕಾರು ನಿಲ್ಲಿಸಿ ಸುತ್ತಾಡುತ್ತಾ ಹಾಗೇ ನಮ್ಮ ಮನೆಗೂ ಬರುತ್ತಿದ್ದರು.

ಆಟೋಟಗಳಲ್ಲಿ ವೈ.ಎನ್.ಕೆ.ಗೆ ಅಷ್ಟಾಗಿ ಆಸಕ್ತಿಯಿದ್ದಂತೆ ನನಗನ್ನಿಸಲಿಲ್ಲ. ಅವರು ಗಾಲ್ಫ್ ಕ್ಲಬ್ಬಿನ ಮೆಂಬರಾಗಿದ್ದರೂ ಗಾಲ್ಫ್ ಆಡಿದ್ದುದನ್ನು ನಾನು ನೋಡಿರಲಿಲ್ಲ. ಅವರ ಕಾರ್ಯಾಲಯದ ಹತ್ತಿರವೇ ಬಿಲಿಯರ್ಡ್ಸ್ ಕ್ಲಬ್ ಇತ್ತು. ಅಲ್ಲಿಗೆ ಅವರು ಬರುತ್ತಿದ್ದದದ್ದು ಬಿಲಿಯರ್ಡ್ಸ್ ಆಟಕ್ಕಲ್ಲ, ನನ್ನ ಜತೆಗೆ ಮಾತಾಡುವುದಕ್ಕಷ್ಟೆ. ನಾನು ಅರ್ಧ ಗಂಟೆಯ ಬಿಲಿಯರ್ಡ್ಸ್ ಆಡುತ್ತಿದ್ದರೆ ವೈ.ಎನ್.ಕೆ. ಆಟ ನೋಡುತ್ತ ಮಾತಿನ ಹಿನ್ನೆಲೆ ಒದಗಿಸುತ್ತಿದ್ದರು.

ವೈ.ಎನ್.ಕೆ.ಯ ಪ್ರೇರಣೆಯಿಂದ, ನಾನು 'ಪ್ರಜಾವಾಣಿ' ಪತ್ರಿಕೆಯ 'ಮಿಡ್ಲ್' ಅಂಕಣಗಳನ್ನು ಬರೆಯಲಾರಂಭಿಸಿದೆ. ಆಮೇಲೆ 'ಕನ್ನಡ ಪ್ರಭ' ಪತ್ರಿಕೆಯ ಸಂಪಾದಕರಾದ ಮೇಲೆ ನನಗೆ ''ನಿಮಗೆ ತೋಚಿದ ಏನಾದರೂ ಹೊಸ ಹೊಸದಾಗಿ ವಾರ ವಾರವೂ ಬರೆದುಕೊಡಿ'' ಅಂತ ಒಂದು ಖಾಲಿ ಚೆಕ್ ಕೊಟ್ಟರು. ಆಗ ನಾನು ಆ ಪತ್ರಿಕೆಗೆ ಟಿ.ವಿ. ವಿಮರ್ಶೆಯಲ್ಲದೆ, ಚುಟುಕಗಳು, 'ಗೂಢ ಲಿಪಿಬಂಧ' ಎನ್ನುವ ಕನ್ನಡಕ್ಕೆ ಅಪರೂಪವೆನ್ನಿಸುವ ಒಗಟು, ಇವನ್ನು ಕೆಲಕಾಲ ಬರೆಯುತ್ತಿದ್ದೆ. ವೈ.ಎನ್.ಕೆ. ಬರೆಯುತ್ತಿದ್ದ ಅಂಕಣಗಳಿಗೆ ಸಾಮಗ್ರಿ ಒದಗಿಸುವುದರಲ್ಲಿ ನಾನೂ ಸಹಕರಿಸುತ್ತಿದ್ದೆ. ನಾನು

ಕೊಟ್ಟ 'ನಿಕ್ ದ ಗ್ರೀಕ್' ಎಂಬ ಜಗತ್ಪ್ರಸಿದ್ಧ ಜೂಜುಗಾರನ ಬಗ್ಗೆ ಪುಸ್ತಕ, 'ವಾಲ್ಟರ್ ವಿಂಚಲ್' ಎಂಬ ಅಂಕಣಕಾರನ ಅಮೂಲ್ಯ ಸಂಕಲನ ಮುಂತಾದವನ್ನು ವೈ.ಎನ್.ಕೆ. ಓದಿ ತಮ್ಮ ಅಂಕಣಗಳಲ್ಲಿ ಉಪಯೋಗಿಸಿಕೊಂಡ ಮೇಲೆ ನನ್ನ ಅಪ್ಪಣೆ ಕೇಳಿ ತಮ್ಮ ಗ್ರಂಥ ಭಂಡಾರಕ್ಕೆ ಸೇರಿಸಿಕೊಂಡದ್ದು ಇಲ್ಲಿ ನೆನಪಿಗೆ ಬರುತ್ತದೆ.

ನನ್ನ ರೇಡಿಯೋ ನಾಟಕಗಳನ್ನು ವೈ.ಎನ್.ಕೆ. ಬಹುವಾಗಿ ಮೆಚ್ಚುತ್ತಿದ್ದರು. ಅವುಗಳ ತಂತ್ರವನ್ನು ನನ್ನಲ್ಲಿ ಪ್ರಸ್ತಾಪಿಸಿ ಆ ನಾಟಕಗಳು ತಾವು ಕೇಳಿದ ವಿಶ್ವದ ಅನೇಕ ನಾಟಕಗಳ ಸಮನಾಗಬಲ್ಲವೆಂದು ತಲೆದೂಗುತ್ತಿದ್ದರು. ರೇಡಿಯೋ ತಂತ್ರ ಮಾತ್ರವಲ್ಲದೆ ವೈ.ಎನ್.ಕೆ.ಯವರ ಲೋಕ ವ್ಯವಹಾರ ಜ್ಞಾನದ ವ್ಯಾಪ್ತಿ ಬಹಳ ವಿಸ್ತಾರವಾಗಿದ್ದನ್ನು ತಿಳಿದ ನಾನು ಅವರನ್ನು ಆಲ್ ಇಂಡಿಯಾ ರೇಡಿಯೋವಿನ ಹೈದರಾಬಾದ್ ಕೇಂದ್ರದಲ್ಲಿ ಆಗ ತೆರವಾಗಿದ್ದ ಅಸಿಸ್ಟೆಂಟ್ ಪ್ರೊಡ್ಯೂಸರ್ ಪದವಿಗೆ ಸೇರಬೇಕೆಂದೂ ಅವರ ಆಯ್ಕೆಗೆ ನಾನು ಸಹಾಯ ಮಾಡುವೆನೆಂದೂ ಒತ್ತಾಯಿಸಿದೆ. ತಾವು ಪತ್ರಿಕೋದ್ಯಮದಲ್ಲಿ ಸಾಧಿಸಬೇಕಾದದ್ದು ಇನ್ನೂ ಇದೆಯೆಂದೂ, ಆ ಕ್ಷೇತ್ರದಲ್ಲಿ ದುಡಿಯಲು ತಮಗೆ ವಿಶೇಷ ಸಾಮರ್ಥ್ಯವಿತ್ತೆಂದೂ ಆಗ ವೈ.ಎನ್.ಕೆ.ಗೆ ಅದಮ್ಯ ನಂಬಿಕೆಯಿದ್ದುದರಿಂದ ಅವರು ನನ್ನ ಸಲಹೆಯನ್ನು ಗೌರವದಿಂದ ನಿರಾಕರಿಸಿದರು. ಅವರ ನಿರ್ಧಾರ ಪ್ರಸಾರರಂಗಕ್ಕೆ ನಷ್ಟವಾದರೂ ಪತ್ರಿಕಾ ಪ್ರಪಂಚಕ್ಕೆ ಪ್ರಚಂಡ ಲಾಭವಾಯಿತೆಂದು ನನಗೊಂದು ಸಮಾಧಾನ!

★★★



ಅಲ್ಲಾ, ಯಾವಾಗ್ಲೂ ನನಗೇ ಯಾಕೆ ಹೀಗೆ?

- ವಾಣೀ ಸುರೇಶ್

ಬೆಳಗ್ಗೆ ನೀವು ವಾಕ್ ಮುಗಿಸಿಕೊಂಡು ಬರೋವಾಗ, ಪಕ್ಕದ್ಮನೆ ಹುಡುಗಿ ಅಷ್ಟು ಬೇಗನೆ ತನ್ನ ಅಲಂಕಾರವನ್ನೆಲ್ಲಾ ಮುಗಿಸ್ಕೊಂಡು, ಟ್ರಿಮ್ ಆಗಿ ಹೊರಟಿದ್ದನ್ನ ನೋಡಿ, ಆಹಾ, ಎಷ್ಟು ಸುಂದರವಾದ ರೀತಿಯಲ್ಲಿ ದಿನ ಪ್ರಾರಂಭವಾಯ್ತು ಅಂದ್ಕೊಳ್ತಾ ಒಂದು ಬಗೆಯ ಧನ್ಯತಾಭಾವದಲ್ಲಿ, ನಿಮ್ಮನೆ ಗೇಟ್ ತೆಗೆಯೋದಕ್ಕೆ ಮುಂದೆ ಹೆಜ್ಜೆ ಇಟ್ರೀ ಅಂತಿಟ್ಕೊಳ್ಳಿ. ಅಷ್ಟು ಹೊತ್ತಿಗೆ ಆ ತರುಣಿ ಅಚಾನಕ್ ಆಗಿ ಟಕ್ ಟಕ್ ಅಂತ ತನ್ನ ಹೈಹೀಲ್ ಸಪ್ಪಳಾ ಮಾಡುತ್ತಾ ನಿಮ್ಮ ಹತ್ತಿರವೇ ಬಂದು, ''ಹಾಯ್, ಗುಡ್ ಮಾರ್ನಿಂಗ್ ಅಂಕಲ್, ಬೆಳಗಿನ ವಾಕ್ ಮುಗೀತಾ?'' ಅಂತ ಕೇಳಿ ನಿಮ್ಮ ಉತ್ತರಕ್ಕೂ ಕಾಯದೇ ''ಬಾಯ್'' ಅಂತ ಬಾಯಿಬಿಟ್ಟು, ಅಷ್ಟೇ ಸುಲಲಿತವಾಗಿ ಟಕ್ ಟಕ್ ಅಂತ ಸದ್ದು ಮಾಡುತ್ತಾ ಬಂದಷ್ಟೇ ಹಗುರವಾಗಿ ತೇಲಿ ಕರಗಿ ಹೋದಳು ಅಂತಿಟ್ಕೊಳ್ಳಿ. ಅವಳು ಸಿಂಪಡಿಸಿಕೊಂಡಿದ್ದ ಇಂಟಿಮೇಟ್ ಪರ್ಫ್ಯೂಮಿನ ಘಮ ಆ ಬೆಳಗಿನ ಛಳೀನೂ ಒದ್ದೋಡಿಸಿ, ಸುತ್ತಲಿನ ಒಂದಿಪ್ಪತ್ತಡಿ ಫಾಸಲೇನ ಎಷ್ಟು ಬೆಚ್ಚಗೆ ಶುಚಿಗೊಳಿಸಿದೆಯಲ್ಲಾ! ಅಂತ ನೀವು ಒಂದು ಥರಾ ಹಿತವಾದ ಗುಂಗನ್ನನುಭವಿಸುತ್ತಾ ನಿಮ್ಮನೇ ಗೇಟ್ ಇನ್ನೇನು ತೆಗೀಬೇಕು...

ಆಗೇನಾಗತ್ತೇಂದ್ರೆ....

ನಿಮ್ಮನೇ ಗೇಟಿನ ಎದುರಿಗೆ ಹಾಕಿರುವ ಹಾಸುಗಲ್ಲಿನ ಚಪ್ಪಡಿ ಹತ್ತಿರ, ಕಳೆದ ತಿಂಗಳು ಸುರಿದ ಧಾರಾಕಾರವಾದ ಮಳೆಯಿಂದಾಗಿ, ಹುಲಿ ಹಲ್ಲಿನ ಥರಾ ಎಬ್ಬಿಕೊಂಡು ನಿಂತಿದೆಯಲ್ಲಾ ಆ ಕಲ್ಲು, ಅದನ್ನ ನೀವು ಎಡವಿ, ಮುಗ್ಗರಿಸಿ, ಬಲವಾಗಿ ಏಟು ತಿಂದು ನಿಧಾನವಾಗಿ ಕುಂಟುತ್ತಾ ಒಳಗೆ ಬರ್ತೀರಿ. ನಿಮ್ಮ ಹೆಬ್ಬೆರಳಿನಿಂದ ರಕ್ತ ಜಿನುಗುಕ್ಕೆ ಶುರುವಾಗುತ್ತೆ. ''ಛೇ, ಈ ಕಲ್ಲೊಂದು ಅನಿಷ್ಟ. ಯಾರಿಗೆಷ್ಟೇ ಹೇಳಿದ್ರೂ ಅಷ್ಟೇ. ಇವತ್ತು ನಾನೇ ಅದಕ್ಕೆ ಗತಿ ಕಾಣಿಸ್ತೀನಿ'' ಅಂತ ಗೊಣಗುತ್ತಾ ಒಳಗೆ ಬಂದು ಸೋಫಾ ಮೇಲೆ ಧೊಪ್ ಅಂತ ಉರುಟ್ಕೋತೀರ. ಆ ಶಬ್ದ ಕೇಳಿ ನಿಮ್ಮ ಪತ್ನಿ ಒಳಗಿನಿಂದ ಕಾಫೀಲೋಟ ಹಿಡ್ಕೊಂಡೇ ನಿಮ್ಮ ಬಳಿ ಬರ್ತಾಳೆ. ''ಬೆಳಗ್ಗೆ ಬೆಳಗ್ಗೇನೇ ಏನ್ರೀ ಇದು ನಿಮ್ಮ ಅವಾಂತರ'' ಅಂತ ರೇಗಿಕೊಂಡೇ ತನ್ನ ಸುಪ್ರಭಾತನಾ ಶುರುಮಾಡ್ದಾಗ, ನೀವು ಆದಷ್ಟು ಬೇಗ ಅದಕ್ಕೆ ಮುಕ್ತಾಯ ಹಾಡುವ ಇಚ್ಛೆಯಿಂದ, ಬೇಗ ಪೆಚ್ಚು ಮುಸುಡಿ ಧರಿಸ್ಕೊಂಡು ನಿಮ್ಮ ರಕ್ತ ರಂಜಿತವಾದ ಹೆಬ್ಬೆರಳನ್ನ ಅವಳಿಗೆ ತೋರಿಸ್ತೀರಿ. ನಿಮ್ಮ ಅದೃಷ್ಟ, ಈ ಡೈವರ್ಷನರಿ ಸ್ಟ್ರಾಟಜಿ ಯಶಸ್ವಿಯಾಗುತ್ತೆ.

''ಅಯ್ಯೋ, ಇದೇನ್ರೀ ಇದು, ಇಷ್ಟೊಂದು ರಕ್ತ ಬರ್ತಿದೆ...'' ಅನ್ನುತ್ತಾ ಆ ಸಾಧ್ವಿ ಸರಸರಾಂತ ರೂಮಿಗೆ ಹೋಗಿ, ಬೀರು ಎಲ್ಲಾ ಗೂರಾಡಿ ಒಂದು ಬ್ಯಾಂಡ್‌ಏಯ್ಡ್‌ನ ಹಿಡ್ಕೊಂಡು ಬರ್ತಾಳೆ. ಹೆಬ್ಬೆರಳನ್ನ ಡೆಟ್ಟಾಲ್‌ನಲ್ಲಿ ಶುಚಿಗೊಳಿಸಿ, ರಕ್ತ ನಿಲ್ಲೋಹಾಗೆ ಬ್ಯಾಂಡ್ ಏಯ್ಡ್‌ನ ಬಿಗಿಯಾಗಿ ಹಾಕ್ತಾಳೆ.

ನೀವು ಒಳಗೊಳಗೆ ನಗ್ತಾ ''ಆಹಾ, ಇವಳ ಕೈಲೂ ಸೇವೆ ಮಾಡಿಸಿಕೊಳ್ಳುವ ಯೋಗ! ಇದೇ ಮಹಾ ಸುದಿನ!'' ಅಂತ ಗುನುಗೋ ಅಷ್ಟರಲ್ಲಿ ಒಂದು ವಾಯವ್ಯಾಸ್ತ್ರ ನಿಮ್ಮ ಮೇಲೆ ಪ್ರಯೋಗವಾಗತ್ತೆ.

''ಸುಮ್ಮನೆ ನಿಮ್ಮ ಪಾಡಿಗೆ ನೀವು ಮರ್ಯಾದೆಯಾಗಿ ತಲೆ ತಗ್ಗಿಸಿಕೊಂಡು ಗಂಭೀರವಾಗಿ ಒಳಗೆ ಬಂದಿದ್ರೆ ಯಾಕೆ ಹೀಗೆಲ್ಲಾ ಏಟು ತಿಂತಿದ್ರಿ?'' ಅಂತ ನಿಮ್ಮಾಕೆ ಕುಟುಕ್ತಾಳೆ. ಮೊದಲೇ ಉರೀತಿರೋ ಘಾಯಕ್ಕೆ ಐಯೋಡೈಸ್ಡ್ ಉಪ್ಪನ್ನ ಧಾರಾಳವಾಗಿ ಉದುರಿಸಿದಂತೆ ಅನ್ನುತ್ತೆ ನಿಮಗೆ. ಮನೆ ಮುಂದಿನ ರಸ್ತೆ ಕಾಣಿಸುವ ಹಾಗೆ ಕಿಟಕಿ ಇರಿಸಿ ಮನೆ ಕಟ್ಟಿಸಿದ್ದಕ್ಕೆ, ಹಾಗೂ ಅದನ್ನ ತನ್ನ ಪತ್ತೇದಾರಿಕೆಗೆ ಬಳಸಿಕೊಳ್ಳುವ ನಿಮ್ಮ ಅರ್ಧಾಂಗಿಯ ಚಾಣಾಕ್ಷತನ ಕಂಡು ನಿಮಗೆ ಒಳಗೊಳಗೇ ಕೋಪ ಬರತ್ತೆ.

ಇದೆಲ್ಲಾ ನಡೆದು ಎರಡು ನಿಮಿಷ ಕೂಡ ಆಗಿಲ್ಲ, ಮತ್ತೊಂದು ಅಸ್ತ್ರ.

''ಇದೇನ್ರೀ ಈರುಳ್ಳಿ, ಹಸಿಶುಂಠಿ ತನ್ನೀ ಅಂದ್ರೆ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ ತಂದು ಬಡಿದಿದ್ದೀರಲ್ಲಾ. ನಂಗೇನು? ಉಪ್ಪಿಟ್ಟಿಗೆ ಈರುಳ್ಳಿ ಶುಂಠಿ ಇಲ್ಲದೇ ಮಾಡ್ತೀನೀಗ'' ಅಂತ ನಿಮ್ಮನ್ನ ಪೇಪರ್ ಓದಕ್ಕೂ ಬಿಡದೇ ನಿಮ್ಮಾಕೆ ತನ್ನ ಗೊಣಗಾಟಾನ ಮುಂದುವರಿಸ್ತಾಳೆ. ಫ್ಲೇವರ್ರೇ ಇಲ್ಲದ ಆ ಉಪ್ಪಿನ ಹಿಟ್ಟನ್ನು ತಿನ್ನಬೇಕಾಗುವ ನಿಮ್ಮ ಶೋಚನೀಯ ಪರಿಸ್ಥಿತಿಯನ್ನ ನೆನಸ್ಕೊಂಡು ನೀವು ಮತ್ತೆ ಎದ್ದು ಹೊರಡುಕ್ಕೆ ಸಿದ್ಧರಾಗ್ತೀರ. ಬೆಳಗಾಗೆದ್ದು ಎರಡೆರಡು ಸಲ ಅಂಗಡಿಗೆ ಹೋಗಬೇಕಾಗಿ ಬಂದ ನಿಮ್ಮ ಗ್ರಹಚಾರಾನ ಹಳಿಯುತ್ತಾ ಯಾವುದೇ ಜ್ಞಾನದಲ್ಲಿ ಆಚೆ ಕಾಲಿಡ್ತೀರ.

ಮುಂದಿನ ಸೀನಿನಲ್ಲಿ.....

ಕಾಲಿನ ಬೆರಳನ್ನ ಕೈಯ್ಯಲ್ಲಿ ಹಿಡ್ಕೊಂಡು ನಟರಾಜನ ಭಂಗಿಯಲ್ಲಿ ನೀವು 'ಹಾ' ಅಂತ ನರಳ್ತಾ ಇದ್ದೀರ. 'ಯಾಕಪ್ಪಾ ಏನಾಯ್ತು' ಅಂತ ಸಹಾನುಭೂತಿ ತೋರಿಸ್ತಾ ಇರೋ ಪಕ್ಕದ್ಮನೆ ಹುಡುಗಿಯ ತಾತ ರಾಮರಾಯರು... ಅಂದರೆ ಏನಾಯ್ತು ಅಂತ ಬಿಡಿಸಿ ಹೇಳೋ ಅಗತ್ಯವಿಲ್ಲವಲ್ಲ.

ಸರಿ, ಹತ್ತು ನಿಮಿಷ ಬಿಟ್ಕೊಂಡು ಶುಂಠಿ ಹಿಡ್ಕೊಂಡು ವಾಪಸ್ ಮನೇಗೆ ಬರ್ತೀರ. ಇದ್ದಕ್ಕಿದ್ದ ಹಾಗೆ ಇವತ್ತು ಬೆಳಗ್ಗೆ ವಾಕ್ ಮುಗಿಸಿ ಬಂದಾಗ ಆದ ಹಿತವಾದ ಅನುಭವ ಮತ್ತೆ ನೆನಪಿಗೆ ಬರುತ್ತೆ. ನಿಮ್ಮಷ್ಟಕ್ಕೆ ನೀವೇ ನಗುತ್ತಾ ಗೇಟ್ ತೆಗೆಯುಕ್ಕೆ ಒಂದು ಹೆಜ್ಜೆ

ಮುಂದಿಟ್ಟೀರ. ಮರುಕ್ಷಣದಲ್ಲಿ ಮತ್ತೆ 'ನಟನಂ ಆಡಿನಾರ್'ನ ಪುನರಾವೃತ್ತಿ. ಹಾಕಿದ್ದ ಬ್ಯಾಂಡ್‌ಏಡ್ ಅರ್ಧ ಕಿತ್ಕೊಂಡು ರಕ್ತ ಸುರಿಯುಕ್ಕೆ ಷುರುವಾಗಿರತ್ತೆ. ರಾಮರಾಯರು ಮಾತ್ರ ಇಲ್ಲ - ಅಷ್ಟೇ ವ್ಯತ್ಯಾಸ ಓಂದಿನ ಸೀನ್ ಗೂ ಈಗಿನ್‌ದಕ್ಕೂ... ಪಾಪ ರಾಮರಾಯರ್ದು ತುಂಬಾ ಶಿಸ್ತಿನ ಜೀವನ ತಿಂಡಿ ಕಾಫಿ ಎಲ್ಲಾ ಸರಿಯಾದ ಹೊತ್ತಿಗೆ ಆಗ್ಬಿಡ್ಬೇಕು. ಅದಕ್ಕೇ ಒಳಕ್ಕೆ ಹೋಗಿದ್ದಿರ್ಬೇಕು.

ಯಾಕೆ ಹೇಳುಕ್ಕೆ ಬಂದೇ ಅಂದ್ರೆ, ನನಗೆ ಯಾವಾಗ್ಲೂ ಈ ಥರಾ ಏನಾದ್ರೂ ಆಗ್ತಾನೇ ಇರುತ್ತೆ. ಇತ್ತೀಚೆಗೆ ನಡೆದ ಒಂದು ಸಂಗ್ತಿ ಕೇಳಿ. ಅವತ್ತು ಮದ್ರಾಸಿಗೆ (ಈಗ ಚೆನ್ನೈ ಅನ್ನಬೇಕೇನೋ ಅಲ್ವಾ?) ಒಂದು ಮದುವೆಗೋಸ್ಕರ ಸಂಜೆಯಿಂದ ಸಂಜೆ ಡ್ರೈವ್ ಮಾಡಿಕೊಂಡು ಹೋದ್ವಿ. ಅದೋ ಇವರ ಬಿಸಿನೆಸ್ ವ್ಯವಹಾರಕ್ಕೆ ಸಂಬಂಧಪಟ್ಟೋರ ಕಡೆಯ ಯಾರದ್ದೋ ಮಗನ ಮದುವೆ. ನಂಗೇನು ಗೊತ್ತಾಗತ್ತೆ ಅದೆಲ್ಲಾ ಸದ್ಯ.

ನಾನಂತೂ ಎರಡು ರಾತ್ರಿ ಎರಡು ಹಗಲು ಅಡಿಗೆ ಕೆಲಸ ತಪ್ಪಿಸ್ಕೊಂಡು ಹಾಯಾಗಿ, ವುಡ್‌ಲ್ಯಾಂಡ್ಸು, ಶರವಣಭವ ಅಂತ ಸುತ್ತಾಡಿಕೊಂಡಿರಬಹುದು. ಹಾಗೇ ಒಂದೆರಡೇ ಗ್ರಾಂಡ್ ಆಗಿರೋದು, ಒಂದ್ನಾಲ್ಕೇ ಸಿಂಪಲ್ ಆಗಿರೋ ಈವನಿಂಗ್ ವೇರ್ ಸೀರೆಗಳನ್ನ ''ನಲ್ಲೀಸ್''ಗೋ ''ಕುಮರನ್ಸ್''ಗೋ ನುಗ್ಗಿ ಹಿಡ್ಕೊಂಡು ಬರಬಹುದೂಂತ ಲೆಖ್ಖಹಾಕಿ ಹೊರಟಿದ್ದು. ಇವರನ್ನ embarass ಮಾಡ್ಬೇಕು ಅನ್ನೋ ಉದ್ದೇಶ ಖಂಡಿತಾ ಇರಲಿಲ್ಲ.

ಸರಿ, ಹೋದ್ವಿ. ರಾತ್ರಿ ಬಿಸಿ ಬಿಸಿ ಊಟ. ಐಸ್‌ಕ್ರೀಮು ಎಲ್ಲಾ ಮೆದ್ದು, ರೂಮಿನಲ್ಲೇ ತಮಿಳು ಸಿನೆಮಾ ನೋಡಿಕೊಂಡು ರಿಲ್ಯಾಕ್ಸ್ ಮಾಡಿದ್ದೂ ಆಯ್ತು. ಬೆಳಗ್ಗೆ ಆಗುಕ್ಕಿಲ್ಲ, ''ಬೇಗನೇ ಹೋಗೋಣ ಮದ್ವೆ ಮನೇಗೆ. ಇಲ್ಲೆಲ್ಲಾ ನಮ್ಮ ಹಾಗಲ್ಲ, ಮುಹೂರ್ತ, ಊಟ ಎಲ್ಲಾ ವಿಪರೀತ ಬೇಗ. ಹೊರಡು ಹೊರಡು'' ಅಂತ ಇವರು ಅರ್ಜೆಂಟ್ ಮಾಡಿ ನನ್ನನ್ನೂ ಹೊರಡಿಸ್ಕೊಂಡು ಹೊರಟೇ ಬಿಟ್ರು.

ಆ ಮದ್ವೆ ಮನೇಲೋ ಆ ಹೊಸಹೊಸಾ ಡಿಸೈನಿನ ಸೀರೆಗಳ ಅಂದ ಏನು ಕೇಳ್ತೀರಿ, ಹೊಸಾ ಪ್ಯಾಟರ್ನ್ ಒಡವೆಗಳ ವೈಭವಾನ ಏನು ಕೇಳ್ತೀರಿ - ಅಷ್ಟೆಲ್ಲವನ್ನೂ ಆ ಸೆಖೇಲಿ ಹೇರಿಕೊಂಡು ಸರಪರಗುಟ್ತಿದ್ದ ಜಯಲಲಿತೆಯರು! ಅವರುಗಳ ಬಾಡಿಗಾರ್ಡುಗಳಂತೆ ಕಾಣುತ್ತಿದ್ದ ಅವರ ಗಂಡಂದಿರುಗಳು (ಯಜಮಾನರು ಅನ್ನೋ ಪದ ನಮ್ಮ ಕರ್ನಾಟಕಕ್ಕೇ ಸರಿ ಅಂತ ನನ್ನ ಭಾವನೆ) ನಾವೇನೋ ಎಷ್ಟು ಬೇಗ ಅಂತ ಹೋಗಿದ್ದರೂ ಮುಕ್ಕಾಲು ಭಾಗದ ಶಾಸ್ತ್ರಗಳೆಲ್ಲಾ, ಕೊನೆಗೆ ಮಾಂಗಲ್ಯಧಾರಣೆಯೂ ಸಹಾ ಮುಗಿದೇ ಹೋಗಿತ್ತು. ನಮ್ಮ ಬೆಂಗಳೂರಿನವರಿಗಿಂತ ಹೆಚ್ಚಾಗಿ ಎಲ್ಲಾ ಜನರೂ ಎದ್ದೆದ್ದು ಊಟಕ್ಕೆ ಹೊರಡ್ತಿದ್ರು.

ಮದ್ವೆ ಮಂಟಪದಲ್ಲೂ ಅಷ್ಟೇ, ಬರೀ ಮದುವೆ ಗಂಡು, ಹೆಣ್ಣು, ಹುಡುಗನ ತಾಯಿ, ಒಂದಿಷ್ಟು ಜನ ಧಡೂತಿ ಹೆಂಗಸರು, ಒಬ್ಬ ಚಿಕ್ಕ ಕಾಲೇಜು ಹುಡುಗ - ಕುರ್ತಾ ಪೈಜಾಮ ಹಾಕಿಕೊಂಡು ಪರದಾಡ್ತಿದ್ದೋನು - ಇಷ್ಟೇ ಜನ ಇದ್ದದ್ದು. ವಾದ್ಯಾರು ಆ ಬಡಪಾಯಿ ಹುಡುಗನ್ನ ಹಿಡ್ಕೊಂಡು ಏನೋ ಮಂತ್ರ ರಿಪೀಟ್ ಮಾಡಿಸ್ತ ಗೋಳು ಹುಯ್ಕೋತಿದ್ರು. ''ಓಹೋ ಇವರಲ್ಲೂ ನಮ್ಮ ಹಾಗೆ ನಾಗೋಲಿ, ಹೊಳಲು ಸುತ್ತೋದು ಎಲ್ಲಾ ಶಾಸ್ತ್ರ ಇದೇಂತ ಕಾಣುತ್ತೆ. ಆದಕ್ಕೇ ಭಾವಮೈದುನನ ಪಾರ್ಟು ಮಾಡಿಸಕ್ಕೇ ಅಂತ ಯಾವ್ದೋ ಹೈದನ್ನ ಹಿಡ್ಕೊಂಡು ಬಂದಿದ್ದಾರೆ'' ಅನ್ಕೊಂಡೆ. ಯಾಕೇಂದ್ರೆ ನನಗೆ ಗೊತ್ತಿತ್ತು - ಮದ್ವೆ ಹುಡುಗಿ - ಆಗರ್ಭ ಶ್ರೀಮಂತರ ಒಬ್ಬಳೇ ಸಂತಾನ, ಡ್ಯಾನ್ಸರ್ರು, ಡಬಲ್ ಗ್ರ್ಯಾಜುಯೇಟು, ತುಂಬಾ ಲಕ್ಷಣವಾಗಿದ್ದಾಳೆ, ಮದ್ವೆಯಾದ ತಕ್ಷಣ ಅಮೆರಿಕಾಗೆ ಹಾರ್ತಿದಾಳೆ. ಅಂತೆಲ್ಲಾ, ಯಾವಾಗಲೂ ಏನಾದ್ರೂ ಅಭಾಸ ಮಾಡ್ತೀಯಾಂತ ಇವರು ವರಿ ಮಾಡ್ಕೋತಿರ್ತಾರಲ್ಲ ಅಂತ ನಾನು ಆ ಸಲ ಎಲ್ಲಾ ವಿಷಯಾನೂ ಮೊದಲೇ ತಿಳ್ಕೊಂಡು, ಏನೇನೇನೂ ತಪ್ಪು ಮಾಡ್ಲೇಬಾರ್ದೂಂತ ಮನಸ್ಸು ಮಾಡಿ ನನ್ನ ಹೋಮ್‌ವರ್ಕ್‌ನೆಲ್ಲಾ ಚೆನ್ನಾಗಿಯೇ ಮಾಡ್ಕೊಂಡು ಹೋಗಿದ್ದೆ.

ಸರೀ, ಸ್ವಲ್ಪ ಹೊತ್ತು ಅಲ್ಲೇ ಕುರ್ಚೀ ಸಾಲಲ್ಲಿ ಕೂತಿದ್ದ ಶಾಸ್ತ್ರ ಮಾಡಿ ಕಲಾಪಗಳಿಗೆ ಸ್ವಲ್ಪ ವಿರಾಮ ಸಿಕ್ಕಿದ ತಕ್ಷಣ ನಾವಿಬ್ಬರೂ ಸ್ಟೇಜ್ ಹತ್ತಿರ ಹೋಗೋದಕ್ಕೂ ಪಾಪ, ಆ ಕುರ್ತಾ ಹುಡುಗನ್ನ ವಾದ್ಯರು ತನ್ನ ಹಿಡಿತದಿಂದ ಬಿಡುಗಡೆ ಮಾಡಕ್ಕೂ ಜೊತೆ ಆಯ್ತು. ಅವನಿಗೆ ಸಧ್ಯ ಅಲ್ಲಿನ ಹೊಗೆ ಕಾಟದಿಂದ ತಪ್ಪಿಸಿಕೊಂಡು ಜಾಗ ಖಾಲಿ ಮಾಡಿದರೆ ಸಾಕಾಗಿತ್ತೂಂತ ಕಾಣುತ್ತೆ - ಆಗ್ತಾನೇ ಒಳಗೆ ಬರ್ತಿದ್ದ ಯಾರೋ ಕಾಲೇಜು ಹುಡುಗರ್ನ್ನ ನೋಡಿ ಹಾಯ್ ಅಂತ ಕೂಗಿಕೊಂಡು ಹೊರಟು ಹೋದ.

ಇವರು ಯಥಾಪ್ರಕಾರ ಷಿವಲ್ರಸ್ ಆಗೋ, ಅಥವಾ ಮುಂಜಾಗ್ರತೆಯಿಂದಲೋ, ಹಿಂದೆ ನಿಂತ್ಕೊಂಡು, ''ನೀನು ಮುಂದೆ ನಡಿ, ನಿಂತುಬಿಟ್ಟ್ರಾಗಲ್ಲ'' ಅಂತ ನನ್ನನ್ನೇ ಮುಂದೆ ತಳ್ಳಿದರು. ನಾನು ಇನ್ನೇನು ಮಾಡಲಿ, ಪ್ರೆಸೆಂಟೇಷನ್ ಹಿಡ್ಕೊಂಡು ಎರಡು ಹೆಜ್ಜೆ ಮುಂದೆ ಹೋಗಿ, ಇವರು ಬರ್ಲಿ ಅಂತ ಒಂದೆರಡು ನಿಮಿಷ ಕಾದೆ. ಅಷ್ಟು ಹೊತ್ತಿಗೆ ಯಾರೋ, ಬಹುಶಃ ಇವರ ಬಿಸಿನೆಸ್ ಮಿತ್ರರಿರಬಹುದು, ಇವರನ್ನು ನೋಡಿ, "oh! so glad you could make it...." ಎನ್ನುತ್ತಾ ಇವರೊಂದಿಗೆ ಮಾತನಾಡಲು ಪ್ರಾರಂಭಿಸಿದರು. ಅಷ್ಟು ಹೊತ್ತಿಗಾಗಲೇ ನಾನು ಪಸೆಮಣೆ ಬಳಿ ಬಂದಿದ್ದೆ. ಆ ಘಳಿಗೇಲಿ ಇವರ ಮುಖದ ಮೇಲೆ ಏನೋ ತಳಮಳ, ಎಂಥದ್ದೋ ಕಸಿವಿಸಿ ಕಂಡ ಹಾಗಾಯ್ತು. ಎಲ್ಲಿ ನಾನು ಇನ್ನೇನು ಅಭಾಸ ಮಾಡಿಬಿಡ್ತೀನೋ ಅನ್ನೋ ಆತಂಕ ಇರಬೇಕು ಅವರಿಗೆ. ಪಾಪ ಅನ್ನಿಸ್ತು. ಹಿಂದೊಂದ್ಸಲ ನಾನು ಮದುವೆ ಹುಡುಗನಿಗೆ Many happy returns of the

day ಹೇಳಿದ್ದು ನೆನಪಿಗೆ ಬಂದು ನನಗೇ ನಗು ಬಂತು. ಇವರಿಗೆ ಕಣ್ಣಿನಲ್ಲೇ reassure ಮಾಡಿ, ಅಷ್ಟು ಹೊತ್ತಿಗೆ ತೀರಾ ಹಸೆಮಣೆ ಹತ್ತಿರಾನೇ ಬಂದಿದ್ರಿಂದ, ಮುಂದೆ ಹೋಗಿ ಮದುವೆ ಹುಡುಗನಿಗೆ ಪ್ರೆಸೆಂಟ್ ಕೊಟ್ಟು"Wish you a long and happy married life' ಅಂತ ಹೇಳೇ ಬಿಟ್ಟೆ.

ಇದ್ದಕ್ಕಿದ್ದ ಹಾಗೇ ಗುಡುಗು ಸಿಡಿಲು, ಎಲ್ಲಾ ಒಟ್ಟಿಗೆ ಹೊಡೆದ ಹಾಗೆ ಅಲ್ಲಿದ್ದೋರೆಲ್ಲಾ ಜೋರಾಗಿ ಗಹಗಹಿಸಿ ನಗುಕ್ಕೆ ಶುರು ಮಾಡಿದರು. ನಾನೇನೂ ತಪ್ಪು ಮಾಡಲಿಲ್ಲವಲ್ಲಾ ಅಂತ ಯೋಚಿಸುತ್ತಾ ಇವರ ಮುಖ ನೋಡಿದೆ. ಅದು ಸುಟ್ಟ ಬದನೇಕಾಯಿಯ ತರಹ ಆಗಿತ್ತು. ಮದುವೆ ಹುಡುಗನ್ನ ನೋಡಿದೆ. ಅವನು ಬಿದ್ದು ಬಿದ್ದು ಹೋ ಅಂತ ನಗ್ತಿದ್ದ. ಹುಡುಗಿ ನಗಬೇಕೋ ಅಳಬೇಕೋ ಎಂಬ ತೊಳಲಾಟದಲ್ಲಿದ್ದಂತಿತ್ತು.

ಹುಡುಗನ ತಾಯಿ ತಂದೆ ಪೆಚ್ಚಾಗಿದ್ದರು. ಹುಡುಗಿ ತಾಯಿಗಂತೂ ಕೋಪವೇ ಬಂದಿತ್ತು. ಯಾರ ಮೇಲೆ? ಸಧ್ಯ ನನ್ನ ಮೇಲಂತೂ ಅಲ್ಲ ಅಂತ ನನಗೇ ಗೊತ್ತಾಗೋ ಹಾಗೆ ಆಯ್ತು. ಯಾಕೇಂದ್ರೆ ಆಕೆ ಪಾಪ ಮದುವೆ ಹುಡುಗನ ಹತ್ತಿರ ಹೋಗಿ ಹೊಸದಾಗಿ ಗಳಿಸಿದ ತನ್ನ ಅತ್ತೆತನಾನ ಪ್ರದರ್ಶಿಸುಕ್ಕೆ ಪ್ರಾರಂಭಿಸಿದ್ದಳು.

ಅಬ್ಬಾ ಎಷ್ಟು ಧೈರ್ಯ ಇರ್ಬೇಕು ಈಕೆಗೆ! ತಾಳಿ ಕಟ್ಟಿದ ಸ್ವಲ್ಪ ಹೊತ್ತಲ್ಲೇ ಅಳಿಯನ್ನ ಅವನ ತಾಯಿ ತಂದೆ ಇದುರಿಗೇ ಇಷ್ಟು ಜಬರ್‌ದಸ್ತಿ ಮಾಡಿ ಹೆದರಿಸುಕ್ಕೆ ಹೊರಟಿದ್ದಾಳಲ್ಲಾ ಅಂತ ನನಗೆ ಆಶ್ಚರ್ಯ. ಆ ವೇಳೆಗಾಗಲೇ ಅಲ್ಲಿದ್ದ ಮಾಮಿಯಾರ್ ಗಳೆಲ್ಲಾ ಏ? ಎನ್ನಾ ಆಚಿ? ಅಂತ ವಿಚಾರಿಸುಕ್ಕೆ ಶುರು ಮಾಡಿದ್ದರು. ಸರಿಯಾಗಿ ಕೇಳಿಸ್ಕೊಳ್ಳೋಣ ಅಂತ ನಾನು ಹತ್ತಿರಕ್ಕೆ ಹೋದೆ.


ಆಕೆ ಹುಡುಗನ್ನ ಕುರಿತು "ನಾ ಅಪ್ಪವೇ ಅಂದ ಬ್ರಾಂಡ್ ನ್ಯೂ ಸಿಲ್ಕ್ ವೇಷ್ಟಿ ಕಟ್ಟಿಕ್ಕೋವೇಂಡಾನ್ನ ಶೊನ್ನೆ... ನೀಂಗ ಎಂಗೆ ನಾನ್ ಸೊಲ್ರದಾ ಕೇಕ್ರಿಂಗೋ?" ಅಂತ ಅಂದಿದ್ದು ಕೇಳಿಸ್ತು.

(ನಾನು ಆಗಲೇ ಹೇಳಿದೆ. ಆ ಹೊಚ್ಚ ಹೊಸಾ ಸಿಲ್ಕ್ ಮುಗುಟ ಉಟ್ಕೋಬೇಡಿ ಅಂತ. ನೀವೆಲ್ಲಿ ನನ್ನ ಮಾತು ಕೇಳ್ತೀರಾ?)

ಪಾಪ, ಹುಡುಗನ ಪಾಡು ನೋಡಿ ಸ್ವಲ್ಪ ಮುಜುಗರವೇ ಆಯ್ತು ನನಗೆ. ಅವನ ಮದುವೆ ದಿನಾನೂ ಗ್ರಾಂಡ್ ಆಗಿ ಡ್ರೆಸ್ ಮಾಡ್ಕೋಬೇಡಾನ್ನೋದು ಯಾವ ನ್ಯಾಯ ಅನ್ನಿಸ್ತು. ಇವರಿದ್ದ ಕಡೆ ಕಣ್ಣು ಹಾಯಿಸ್ದೆ. ಮುಖ ಟೊಮ್ಯಾಟೋ ತರಹ ಕೆಂಪಗಾಗಿತ್ತು. ಕಣ್ಣುಗಳು ಇನ್ನೂ ಕೆಂಪು! ಓಹೋ ದೂರ್ವಾಸ ಮುನಿಗಳ ಆವಾಹನೆ ಆಗಿದೇಂತ ತಿಳೀತು. ಆದರೆ ನಾನು ಏನು ತಪ್ಪು ಮಾಡಿದ್ದರಿಂದ ಅಂತ ಮಾತ್ರ ಅರ್ಥವೇ ಆಗಲಿಲ್ಲ ನೋಡಿ!

ಆಗ ಇನ್ನೊಂದು ಆಶ್ಚರ್ಯ ನಡೀತು. ಒಳ್ಳೇ ಬ್ರೇಕ್ ಹಾಕಿದ ಹಾಗೆ ಒಮ್ಮೆಲೇ ಎಲ್ಲರ ನಗು, ಕೇಕೆಗಳು ನಿಂತುಹೋದವು. ಯಾಕೇಂತ ನೋಡ್ತೀನಿ - ಆ ಹೊಳಲು ಸುತ್ತುತ್ತಿದ್ದ ಹುಡುಗ - ಅದೇ ಆ ಕುರ್ತಾ ಪೈಜಾಮಾ ಹೀಚು - ಅಲ್ಲಿ ಮತ್ತೆ ಬಂದು ಹಸೆಮಣೆ ಹತ್ರ ನಿಂತಿದ್ದ. ಮದ್ವೆ ಗಂಡು, ನನ್ನ ಕಡೆ ತಿರುಗಿ, "Madame, Meet my son in law. Prof. Vijayaraghavan, faculty member at Stanford" ಅಂತ ನಿಜವಾದ ಮದುಮಗನ್ನ ನನಗೆ ಪರಿಚಯಿಸಿದರು. ಮೂರಿಂಚು ಮೇಕಪ್ ಮಾಡ್ಕೊಂಡಿದ್ದ ನನ್ಮುಖದ ಸರದಿ ಈಗ ಸುಟ್ಟ ಬದನೇಕಾಯಿ ಆಗೋಕ್ಕೆ. ಸ್ಮಾರ್ಟಾಗಿ ಕಾಣಿಸಿದ ತಪ್ಪಿಗೆ ಹುಡುಗನ ಮಾವನಿಗೇ ನಾನು ಪ್ರೆಸೆಂಟ್ ಕೊಟ್ಟು ವಿಷ್ ಮಾಡ್ಬಿಟ್ಟಿದ್ದೆ.

ಹಾಗೂ ಹೀಗೂ ಮಾತಿಲ್ಲದೇ ಊಟ ಮುಗಿಸಿ, ಹೋಟೆಲಿಗೆ ಹಿಂತಿರುಗಿದ್ವಿ. ಆಮೇಲೆ ನಲ್ಲೀಸೂ ಇಲ್ಲ, ಗಿಲ್ಲೀಸೂ ಇಲ್ಲ. ದುರ್ದಾನ ತೊಗೊಂಡೋರ ಹಾಗೆ ನನ್ನನ್ನೂ ಹೊರಡಿಸಿಕೊಂಡು ಮತ್ತೆ ಸಂಜಿಂದ ಸಂಜೆ ಡ್ರೈವ್ ಮಾಡಿಕೊಂಡು ಬೆಂಗಳೂರಿಗೆ ತಲುಪಿ ಮನೆ ಸೇರಿದಾಗ ಮಧ್ಯರಾತ್ರಿ. ಅಂಥಾ ಸರಿಹೊತ್ತಿನಲ್ಲಿ ಡ್ರೈವ್ ಮಾಡಿಕೊಂಡು ಬಂದಿದ್ದಕ್ಕೆ ಅತ್ತೆ ಮಾವಂದಿರ ಹತ್ತಿರ ಬೈಗಳ ಬೇರೆ. ಇವರ ಮೂಡು ಸರಿಹೋಗಕ್ಕೆ ಮತ್ತೆ ಐದಾರು ತಿಂಗಳೇ ಬೇಕಾಯ್ತು. ಅಲ್ಲಾ, ಬ್ಯಾಂಡ್‌ಏಯ್ಡ್‌ನಲ್ಲಿ ಹೋಗೋದಕ್ಕೆ ದಪ್ಪನೆಯ ಬ್ಯಾಂಡೇಜ್ ಹಾಕ್ಕೊಂಡಂತೆ ಅಂತ ನವ್ಯ ಗಾದೆ ಹೇಳೋಹಾಗೆ, ಯಾಕೆ ನಂಗೇ ಯಾವಾಗ್ಲೂ ಹೀಗಾಗತ್ತೇ....!? ಅಷ್ಟಲ್ಲದೇ ಹೇಳ್ತಾ ಇದ್ರೆ, ನಮ್ಮ ಪೂರ್ವೀಕರು, ವೇದ ಸುಳ್ಳಾದರೂ ಗಾದೆ ಸುಳ್ಳಾಗದೂಂತ.



ಪುಸ್ತಕ ವಿಮರ್ಶೆ

ಕೈ ತೋರಿಸಿ....

– ಶಿವು

ಗೋವಿಂದಾ... ಗೋವಿಂದಾ....

ಲೇಖಕರು: ಕಂ.ಭಂ. ಕೃಷ್ಣಮೂರ್ತಿ ಪ್ರಕಾಶನ: ಗೊರೂರು ಪ್ರತಿಷ್ಠಾನ

ಪುಟಗಳು: 96

ಶ್ರೀಯುತ ಕಂ.ಭಂ. ಕೃಷ್ಣಮೂರ್ತಿಯವರು ನನಗೆ ಬಹಳ ವರ್ಷಗಳಿಂದ ಪರಿಚಿತರು, ಕೊರವಂಜಿಗೆ ಕೆ.ಎನ್. ಕಿಟ್ಟನ್ ಎಂಬ ಕಾವ್ಯನಾಮದಿಂದ ಅನೇಕ ಉತ್ತಮ ನಗೆ ಲೇಖನಗಳನ್ನು ಬರೆದಿರುವ ಶ್ರೀಯುತರು, ಅಪರಂಜಿಗೂ ಸಹಾ ಕಳೆದ ಅನೇಕ ವರ್ಷಗಳಿಂದ ಲೇಖನಗಳನ್ನು ನೀಡುತ್ತಾ ಬಂದಿದ್ದಾರೆ. ಕೃಷ್ಣಮೂರ್ತಿಯವರು ಈ ಪುಸ್ತಕವನ್ನು ವಿಮರ್ಶೆಗಾಗಿ ನನಗೆ ಕೊಡುವಾಗ ''ದಯವಿಟ್ಟು ಮುಕ್ತ ಮನಸ್ಸಿನಿಂದ ವಿಮರ್ಶೆ ಮಾಡಿ. ಪರಿಚಿತನೆಂಬ ದಾಕ್ಷಿಣ್ಯ ಬೇಡ'' ಎಂದು ಖಡಾಖಂಡಿತವಾಗಿ ಹೇಳಿ ಕೊಟ್ಟಿದ್ದರು. ನಾನು ''ಆಗಲಿ'' ಎಂದು ಹೇಳಿದ್ದರಿಂದ ಆ ಆಶ್ವಾಸನೆಗೆ ಬದ್ಧನಾಗಿ ಹಲವು ಮಾತುಗಳನ್ನು ಇಲ್ಲಿ ಅನಿವಾರ್ಯವಾಗಿ ಹೇಳಬೇಕಾದ ಪರಿಸ್ಥಿತಿ ಒದಗಿದೆ.

ಈ ಪುಸ್ತಕದ ಮೊದಲ ಒಳಪುಟದಲ್ಲಿ ಪುಸ್ತಕದ ಹೆಸರಿನ ಕೆಳಗೆ ಕಂಸಗಳ ಒಳಗೆ 'ನಗೆಬರಹಗಳು' ಎಂದು ಮುದ್ರಿಸಿದ್ದಾರೆ. ಹಾಗಾಗಿ ಇದೊಂದು ನಗೆಬರಹಗಳ ಸಂಕಲನ ಎಂದು ನಂಬಿ ನಾನು ಪುಸ್ತಕವನ್ನು ಉತ್ಸಾಹದಿಂದ ಓದಲು ಪ್ರಾರಂಭಿಸಿದೆ. ಸುಮಾರು ಎರಡೂವರೆ ಘಂಟೆಗಳಲ್ಲಿ ಪುಸ್ತಕವನ್ನು ಓದಿ ಮುಗಿಸಿದ್ದಾಯಿತು. ಮುಗಿಸಿದ ತಕ್ಷಣ ಲೇಖಕರ ಹೆಸರನ್ನು ಮತ್ತೊಮ್ಮೆ ಖಚಿತಪಡಿಸಿಕೊಳ್ಳಲು, ಪುಸ್ತಕದ ಹೊರಹೊದಿಕೆಯನ್ನು ನೋಡಿದೆ. ಸ್ಪಷ್ಟವಾಗಿ ಕಂ.ಭಂ. ಕೃಷ್ಣಮೂರ್ತಿ ಎಂದಿತ್ತು. ನನ್ನ ಕಣ್ಣುಗಳನ್ನು ನಾನೇ ನಂಬಲಾಗಲಿಲ್ಲ. ಅಪರಂಜಿಯಲ್ಲಿ ಹಿಂದೊಮ್ಮೆ ಪ್ರಕಟವಾದ ಅತ್ಯುತ್ತಮ ನಗೆಲೇಖನ 'ತಿರುಗುಬಾಣ'ದ ಕರ್ತೃ ಈ ಹದಿನೇಳನೇ ದರ್ಜೆಯ ಪುಸ್ತಕದ ಲೇಖಕನೆಂದು ಒಪ್ಪಿಕೊಳ್ಳುವುದು ತೀರಾ ಕಷ್ಟವಾಯಿತು.

ಈ ಪುಸ್ತಕದಲ್ಲಿ ಇಪ್ಪತ್ತು ಅನರ್ಘ್ಯ ರತ್ನಗಳಿವೆ. ಕೇವಲ ಹಲವು ಲೇಖನಗಳನ್ನು ಹೊರತುಪಡಿಸಿ, ಮಿಕ್ಕೆಲ್ಲವೂ ಹಾಸ್ಯ ಲೇಖನಗಳನ್ನು ಹೇಗೆ ಬರೆಯಬಾರದೆಂಬುದಕ್ಕೆ ಮಾದರಿಗಳಾಗಿ ನಿಂತಿವೆ.

ಉದಾಹರಣೆಗೆ 'ಸರ್ಪಮತ್ಸರ' ಎಂಬ 'ನಗೆ' ಲೇಖನವನ್ನೇ ತೆಗೆದುಕೊಳ್ಳಿ. ಪಿಳ್ಳಾರಯ್ಯ ಒಬ್ಬ ಪಿಟೀಲು ವಾದಕ. ಕುಂಜುಮಣಿ ಒಬ್ಬ ಘಟ ನುಡಿಸುವವನು. ಒಂದು ಸಂಗೀತ ಸಭೆಯಲ್ಲಿ ತನ್ನ ಹಳೆಯ ದ್ವೇಷವನ್ನು ತೀರಿಸಿಕೊಳ್ಳುವ ಉದ್ದೇಶದಿಂದ ಕುಂಜುಮಣಿ ಪಿಳ್ಳಾರಯ್ಯನ ಪಕ್ಕ ಕುಳಿತು, (ಮಿಕ್ಕ ವಿದ್ಯಮಾನಗಳನ್ನು ಪಿಳ್ಳಾರಯ್ಯನ ಮಾತುಗಳಲ್ಲೇ ಹೇಳುವುದಾದರೆ),

''ಕುಂಜುಮಣಿ ನನ್ನ ಪಕ್ಕದಲ್ಲೇ ಕೂತಿದ್ದವನು ಘಟಾನ ಮೇಲೆಸೆದು ಬಾರಿಸೋಕ್ಕೆ ಶುರು ಮಾಡಿದ. ನಾನು ಚಿಟ್ಟೇಸ್ವರ ಬಾರಿಸೋದ್ರಲ್ಲೇ ತಲ್ಲೀನನಾಗಿಬಿಟ್ಟಿದ್ದೆ, ನೋಡಿ.

ಆದ್ರಿಂದ ಯಾವುದರ ಪರಿವೆಯೂ ಇರಲಿಲ್ಲ. ಅವ ಘಟ ನನ್ನ ಮೇಲೆ ಬೀಳೋಹಾಗೆ ಎಸೆದ. ಶಾನೆ ಮೇಲಿಂದಲೇ ಘಟ ನನ್ನ ತಲೆಮೇಲೆ ಬಿದ್ದು, ಅದರ ಕಂಠ ಒಡೆದು ನನ್ನ ಕುತ್ತಿಗೆಗೆ ಬಿಗಿದುಕೊಂಡುಬಿಡ್ತು. ಅದರ ಒಡಕಲು ಚೂರುಗಳು ನನ್ನ ಎರಡೂ ಕಣ್ಣುಗಳಿಗೆ ಚುಚ್ಚಿಕೊಂಡಿತು. ನನ್ನ ಎರಡೂ ಕಣ್ಣು ಹಾಗೆ ಇಂಗಿಹೋಯ್ತು. ನೋಡಿ ಸ್ವಾಮಿ, ಆಸ್ಪತ್ರೆಗೆ ನನ್ನ ಸೇರಿಸಿದರು. ಸೀಳಿದ್ದ ತಲೆಗೆ ಸ್ಟಿಚ್ಚುಗಳನ್ನ ಹಾಕಿದರು. ಆದ್ರೆ ಇಂಗಿಹೋದ ದೃಷ್ಟಿ ಮತ್ತೆ ಬರಲೇ ಇಲ್ಲ. ನನಗೆ ಈ ರೀತಿ ಮಾಡ್ಬೇಕೂಂತ್ಲೇ ಕುಂಜುಮಣಿ ಘಟ ಕಲೀಲಿಕ್ಕೆ ಹಟ ಹಿಡ್ದ ಅನ್ನೋ ಚಿದಂಬರ ರಹಸ್ಯ ಆಗ ಬಯಲಾಯ್ತು ನೋಡಿ. ಅಂತೂ ಕುಂಜುಮಣಿಯ ಸರ್ಪಮತ್ಸರ ನನ್ನ ಜೀವನವನ್ನೇ ಕಹಿ ಮಾಡಿಬಿಡ್ತು.'' ಇದು ಈ ಲೇಖಕರ ಹಾಸ್ಯ ಪ್ರಜ್ಞೆಯ ಒಂದು ದೃಷ್ಟಾಂತ.

''ಕೋದಂಡರಾಮಯ್ಯನವರ ಕೊರಗು'' ಎಂಬ ಲೇಖನದಲ್ಲಿ ಲೇಖಕರು ಪ್ರತಿಪಾದಿಸಿರುವ ಮೌಲ್ಯಗಳನ್ನು ನೋಡಿ. ಅವರ ಪ್ರಕಾರ ಒಂದು ಮಿತಿಯಲ್ಲಿ ಭ್ರಷ್ಟಾಚಾರ ನಡೆಸಿದರೆ ಪರವಾಗಿಲ್ಲವಂತೆ. ಯಾವುದನ್ನೂ ಅತಿಯಾಗಿ ಮಾಡಬಾರದು ಎಂದು ಹೇಳಿ ಅದರಿಂದ ನಗೆ ಚಿಮ್ಮಿಸುವ ವಿಫಲ ಯತ್ನ ಈ ಲೇಖನದಲ್ಲಿ ನಡೆದಿದೆ. ಈ ಲೇಖನದಲ್ಲಿ ತತ್ವ ಪ್ರತಿಪಾದಕ ಉಳ್ಳಾಗಡ್ಡಿ ಹೀಗೆನ್ನುತ್ತಾರೆ.

''ಯಾವ್ದೂ ಅತೀ ಆದ್ರೆ ಹೀಗೇ ಆಗೋದು ಕಣಯ್ಯ... ಶಾಖಾಯಲವಣಾಯವಿಲ್ಲದೇ ಈಗಿನ ಕಾಲದಲ್ಲಿ ಸಂಸಾರ ನಿಭಾಯಿಸೋದಕ್ಕೆ ಯಾವನ್ಗಯ್ಯ ಸಾಧ್ಯ.... ಒಂದು ಇತಿ ಮಿತಿ ಇಟ್ಕೊಂಡಿದ್ದರಿಂದ ಯಾರ ಕಣ್ಣಿಗೂ ಬೀಳ್ದೇ ಬಚಾವಾದ್ವಿ. ಈ ಅವಿವೇಕಿಗಳಿಗೆ ಅಷ್ಟೂ ತಿಳೀಬೇಡ್ವಾ''

''ಗುಂಡಪ್ಪನಿಗೆ ಏನು ಬೇಕಂತೆ?'' ಎಂಬ ಲೇಖನ ಅಶ್ಲೀಲತೆಗೆ ಒಂದು ಜ್ವಲಂತ ನಿದರ್ಶನ. ಕಲಬೆರಕೆ ''ವಯಾಗ್ರ''ದಿಂದ ಗುಂಡಪ್ಪನಿಗೆ ಆದ ಅನಾನುಕೂಲಗಳನ್ನು ಅತ್ಯಂತ ವಿವರವಾಗಿ ಚಿತ್ರೀಕರಿಸಿರುವ ಈ ಲೇಖನ ಯಾವುದಾದರೊಂದು ಗುಂಡಿನ ಪಾರ್ಟಿಯಲ್ಲಿ ಹೇಳಿ ಮರೆತು ಬಿಡುಬಹುದಾದ ಸರಕೇ ವಿನಹಾ ಖಂಡಿತಾ ಮುದ್ರಣಕ್ಕೆ ಅರ್ಹವಾದ ವಸ್ತುವಲ್ಲ ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆ.

''ಶಿಕ್ಷಣ'' ಎಂಬ ಲೇಖನದಲ್ಲಿ ನಮ್ಮ ದೇಶದ ಇಂದಿನ ಶಿಕ್ಷಣ ವ್ಯವಸ್ಥೆ ಸಂಪೂರ್ಣವಾಗಿ ನಿಷ್ಪ್ರಯೋಜಕ ಎಂಬ ನಿಲುವನ್ನು ಲೇಖಕರು ಸಮರ್ಥಿಸುವ ಯತ್ನ ನಡೆಸಿದ್ದಾರೆ. ಇದರಲ್ಲಿ ಹಾಸ್ಯವನ್ನು ಹುಡುಕಬೇಕಾದರೆ ಒಂದು ಅತ್ಯಂತ ಪ್ರಬಲ ಸೂಕ್ಷ್ಮದರ್ಶಕ ಅತ್ಯಗತ್ಯ.

ಬರೆಯುತ್ತಾ ಹೋದರೆ ಮುಕ್ಕಾಲು ಪಾಲು ಲೇಖನಗಳ ಕೀಳುಮಟ್ಟವನ್ನು ವಿವರಿಸುತ್ತಾ ಹೋಗಬಹುದು. ಆದರೆ ಅದು ಅನಗತ್ಯ. ಇಷ್ಟು ಮಾತ್ರ ಹೇಳಿದರೆ ಸಾಕೆನಿಸುತ್ತದೆ. ಈ ಪುಸ್ತಕದಲ್ಲಿನ ಬಹುತೇಕ ಲೇಖನಗಳಲ್ಲಿ ''ಉತ್ತಮ ಹಾಸ್ಯ''ಕ್ಕಾಗಿ ಹುಡುಕಾಟ ಇರಾಕಿನಲ್ಲಿ WMD ಗಳಿಗಾಗಿ ನಡೆಸಿರುವ ಹುಡುಕಾಟದಷ್ಟೇ ಫಲಪ್ರದವಾಗಿದೆ.

ಇನ್ನು ಮುಂದಾದರೂ ನಮ್ಮ ಮೆಚ್ಚಿನ ಹಿರಿಯ ಲೇಖಕ ಕಂ.ಭಂ. ಇಂತಹ ತೀರಾ ಕಳಪೆಯ ಮಟ್ಟದ ಪುಸ್ತಕಗಳನ್ನು ಬರೆದು ಕಾಗದವನ್ನು ವ್ಯರ್ಥ ಮಾಡದಿರಲಿ ಎಂದು ಆಶಿಸುವೆ.

ಕರೆಯದೇ ಬರುವವರು

– ಸೂರಿ ಹಾರ್ದಳ್ಳಿ

ನಮಸ್ಕಾರ, ಇಲ್ಲಿ ನಾನು ಹೇಳುತ್ತಿರುವುದೆಲ್ಲಾ ಸತ್ಯ, ಸತ್ಯದ ವಿನಃ ಬೇರೇನೂ ಹೇಳುವುದಿಲ್ಲ. ಎಂದು ಪ್ರಮಾಣ ಮಾಡುವುದಿಲ್ಲ. ಆದರೆ ಇಂತಹ ಘಟನೆ ನಿಮ್ಮ ಬದುಕಿನಲ್ಲಿ ಸಂಭವಿಸುವುದಿಲ್ಲ ಎಂದೇನೂ ನಾನು ಹೇಳುವುದಿಲ್ಲ.

ಇದು ಉಚಿತಗಳ ಕಾಲ ಲಘು ಪಾನೀಯ ಕೊಂಡರೆ ಕ್ರಿಮಿನಾಶಕಗಳು, ವಾಷರ್‌ಗಳು, ಪಿನ್‌ಗಳು ಫ್ರೀ. ಚಾಕಲೇಟು ಕೊಂಡರೆ ಅದರೊಳಗಿರುವ ಹುಳುಗಳಿಗೆ ನೀವು ಕಾಸು ಕೊಡಬೇಕಿಲ್ಲ, ಪುಕ್ಕಟ, ಹುಳುಗಳಿರುವ ಚಾಕಲೇಟನ್ನು ಕೋಲಾಗಳಿಂದ ತೊಳೆದರೆ ಎಡರೆಡರು ಲಾಭ. ಒಂದು ಜಾಹೀರತನ್ನು ಟೀವಿಯಲ್ಲಿ ನೋಡಿದರೆ ಇನ್ನೊಂದು ಜಾಹೀರಾತು ನಿಮಗೆ ಉಚಿತ. ಆನ್‌ಲೈನ್ ಲಾಟರಿ ಟಿಕೇಟುಗಳನ್ನು ಕೊಳ್ಳುವವರಿಗೆ ವಿಷದ ಬಾಟಲ್ ಫ್ರೀ, ಕೇಶ ತೈಲ ಕೊಂಡರೆ ವಿಗ್. ಫ್ರೀ. ಅಕ್ಕನನ್ನು ಮದುವೆ ಮಾಡಿಕೊಂಡರೆ ಅವರ ಜೊತೆಗೆ ತಂಗಿಯೂ ಫ್ರೀ ಎಂಬ ಕಾಲ ಬೇಗನೇ ಬಂದರೂ ಬರಬಹುದು, ಕಾಯುತ್ತಿದ್ದೇನೆ.

ಯಾವುದೇ ಒಂದು ಅಡಿಗೆ ತೈಲ ಕಂಪನಿಯು ಪೊಟ್ಟಣದ ಮೇಲೆ ಕಾಲೆಸ್ಟರಾಲ್ ಫ್ರೀ ಎಂದು ಕೂಡಾ ಬರೆದಿದೆ.

ಕಾರಿನ ಜೊತೆ ಟಿವಿ, ಟಿವಿ ಜೊತೆ ರೇಡಿಯೋ, ರೇಡಿಯೋ ಜೊತೆ ಟೂತ್ ಪೇಸ್ಟ್, ಟೂತ್ ಪೇಸ್ಟಿನ ಜೊತೆ ಬೆಂಕಿಪೊಟ್ಟಣ, ಬೆಂಕಿಪೊಟ್ಟಣದ ಜೊತೆ ಚಾಕ್‌ಪೀಸ್, ಇದು ಇಂದಿನ ವ್ಯಾಪಾರದ ಪರಿ. ಇದರಿಂದಾಗಿ ನಿಮ್ಮ ನಮ್ಮ ಮನೆಗಳಲ್ಲಿ ಬೇಡದ ಅನೇಕ ವಸ್ತುಗಳು ಶೇಖರವಾಗುತ್ತೆ. ಇದೇ ತಂತ್ರವನ್ನು ಬ್ಯಾಂಕುಗಳೂ ಅನುಸರಿಸುತ್ತವೆ. ಗ್ರಾಹಕ ಎಂಬ ಮಿಕವನ್ನು ಸಾಲದ ಬಲೆಯಲ್ಲಿ ಬೀಳಿಸಿಕೊಳ್ಳುವ ತಂತ್ರಗಳು ಇವು. ನಾವುಗಳು ಗಾಳದಲ್ಲಿ ಸಿಕ್ಕಿಸಿದ ಹುಳಗಳಿಗೆ ಆಸೆ ಪಟ್ಟರ ಹುಳುಗಳಿಗೆ ಆಸೆಪಡುವ ಮೀನಿನ ಹಾಗಾಗುತ್ತೇವೆ. ಅದಕ್ಕೇ ನಾನು ಈ ದೇಶ ವಿದೇಶಗಳಿಂದ ಮಾಡಿದ ಸಾಲದ ಎಷ್ಟು ಭಾಗ ನನ್ನ ತಲೆಯ ಮೇಲಿದೆ ಎಂಬುದನ್ನು ಓದಿಯೇ ಮೂರು ಕೊರಗಿ, ನಿದ್ರೆ ಬಿಟ್ಟು ಸಣ್ಣಗಾದವನು.

ನನ್ನ ಮನೆಗೆ ವಾರಕ್ಕೆರಡಾದರೂ ಫೋನುಗಳು ಬರುತ್ತವೆ, ಸಾಲ ಕೊಡ್ತೀವಿ ಸರ್, ತೆಗೆದುಕೊಳ್ಳಿ, ಕಡಿಮೆ ಬಡ್ಡಿ, ಆದರೆ ಬಲು ಒಳ್ಳೆಯ ಸ್ಕೀಮ್, ತುಂಬಾ ಬೆನೆಫಿಟ್‌ಗಳು

ಇವೆ, ಎಂದು ಮಧುರವಾದ ಕಂಠಗಳು ಕೊರೆಯುತ್ತವೆ, ಮೋಡಿ ಮಾಡಲು ಯತ್ನಿಸುತ್ತವೆ. ಆಗ ನನ್ನೊಳಗಿನ ಜಾಗ್ರತ ಮನಸ್ಸು ಎಚ್ಚರಗೊಳ್ಳುತ್ತದೆ. ಮೂಢಾ, ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗರು ಬಂದು ಸೆಳೆವಾಗ ಕಿಬ್ಬದಿಯ ಕೀಲು ಮುರಿದಂತೆ, ಎಂದು ಸರ್ವಜ್ಞ ಎಚ್ಚರಿಸಿದ್ದಾನೆ. ಬೇಡ, ಬೇಡ... ಎಂದು. ಹಾಗಾಗಿ ತನಗೆ ಫೋನಿಸಿದ ಆ ಮಧುರ ಕಂಠಗಳು ನಿರಾಶರಾಗುತ್ತವೆ.

ಹಾಗೆಯೇ ಸಾಲ ತೆಗೆದುಕೊಳ್ಳಿ ಎಂಬ ನೀತಿವಾಕ್ಯಗಳೂ ಇವೆ. ಯಾವಜ್ಜೀವೇತ್ ಸುಖಂ ಜೀವೇತ್, ಋಣಂ ಕೃತ್ವಾ ಘೃತಂ ಪಿಬೇತ್. ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಃ ಕುತ ಎಂಬುದದು. ಸುಟ್ಟು ಬೂದಿಯಾಗುವ ದೇಹ ಮತ್ತೆ ಹುಟ್ಟೀತಾದರೂ ಹೇಗೆ? ಸಾಲ ಮಾಡಿಯಾದರೂ ತುಪ್ಪ ತಿನ್ನು, ಎನ್ನುವುದು.

ತಲೆಯಲ್ಲಿ ಈ ಮಾತುಗಳು ನಿರಂತರವಾಗಿ ಧಿಮಿಗಿಡುತ್ತೆ.

ಇದನ್ನೆಲ್ಲಾ ಯಾಕೆ ಪೂರ್ವಭಾವಿಯಾಗಿ ಹೇಳಬೇಕಾಯಿತೆಂದರೆ ಒಂದು ದಿನ ನನ್ನ ಹೆಂಡತಿ ಹೇಳಿದಳು, ನಿಮಗೆ ನಾಲ್ಕು ಫೋನ್ ಕಾಲುಗಳು ಬಂದಿತ್ತು ಕಣ್ರೀ... ನಿಮ್ಮ ಹತ್ತಿರ ಅರ್ಜೆಂಟಾಗಿ ಮಾತನಾಡಬೇಕಂತೆ, ಸಂಜೆ ಬನ್ನಿ, ಎಂದೆ, ಎಂದು.

ನನ್ನ ಮನೆ ಇರೋದು ಹಿಂದಿನ ಮಾಟಗಾರರ, ರಕ್ಕಸರ ಕತೆಗಳಲ್ಲಿ ಬರುತ್ತದಲ್ಲ, ಹಾಗೆ, ಏಳು ಸಮುದ್ರದಾಚೆಯ ಕೀಳು ಸಮುದ್ರದಲ್ಲಿರೋ ಗಿಳಿಯ ಹೃದಯದಲ್ಲಿ... ಇತ್ಯಾದಿ, ಇತ್ಯಾದಿ ಫ್ಯಾಂಟಸಿ ಕತೆಗಳಿಗೆ ಸರಿ ಹೋಗುವ ಹಾಗೆ. ಸರಿಯಾಗಿ ಮಾರ್ಗ ಸೂಚಿ ಹಾಕಿಕೊಟ್ಟರೂ ಸಿಗದ ಹಾಗಿರೋ ಜಾಗದಲ್ಲಿ ನಾನಿರೋದು. ಹಾಗಾಗಿ ನೆಂಟರು, ಇಷ್ಟರು, ಬಂಧುಗಳು, ಇವರು ಮೊದಲು ಹಲವಾರು ಬಾರಿ ಬಂದಿದ್ದರೂ ಮತ್ತೊಮ್ಮೆ ಬರುವಾಗ ಮತ್ತೆ ದಾರಿ ತಪ್ಪಿ, ಇವನ ಮನೇನೇ ಬೇಡ, ಎಲ್ಲಾದರೂ ಹೋಟೆಲಿನಲ್ಲಿ ಉಳಿದುಕೊಳ್ಳೋಣ, ಎಂದುಕೊಳ್ಳೋದೇ ಜಾಸ್ತಿ. ಇದರಿಂದ ನನಗೆ ತಿಂಗಳ ಖರ್ಚು ಕಡಿಮೆಯಾಗೋದು ಅಂತೂ ಸತ್ಯ.

ಅಂತಹ ನಮ್ಮ ಮನೆಗೆ ಅಂದು ಸಂಜೆ ಏಳು ಜನ ಬಂದಿದ್ದರು, ಸಾಲಾಗಿ, ಈಗಷ್ಟೇ ಕಾಲೇಜಿನಿಂದ ಹೊರಬಂದ, ಠಾಕು ಠೀಕಾಗಿ ದಿರುಸು ತೊಟ್ಟ, ಸವಿಯಾಗಿ ಇಂಗ್ಲಿಷ್ ಪದಗಳನ್ನು ಉದುರಿಸಬಲ್ಲ ಯುವಕ - ಯುವತಿಯರು. ನನಗೆ ದಿಗಿಲಾಯಿತು. ಎಲ್ಲರೂ ಕಾರು ಮಾರುವ ಕಂಪನಿಯವರು. ಕಡಿಮೆ ಬೆಲೆಗೆ ಕೊಡುತ್ತೀವಿ, ಇತರ ಉಪಕರಣಗಳು, ಇನ್ಸೂರೆನ್ಸ್ ಫ್ರೀ, ಎಂದೆಲ್ಲಾ ಆಸೆಗಳ ದೊಡ್ಡ ದೊಡ್ಡ ಕನಸನ್ನು ತನ್ನ ತಲೆಯೊಳಗೆ ತುಂಬಲು ಯತ್ನಿಸಿದರು. ಸಾಲ ತೆಗೆದುಕೊಂಡರೆ ಬಡ್ಡಿ ಇಲ್ಲ, ಇದ್ದರೂ ಕಡಿಮೆ, ಕೆಲ

ವರ್ಷ ವಿಮೆ ಕಟ್ಟುತ್ತೇವೆ, ಕೊನೆಯ ಕಂತುಗಳನ್ನು ವಜಾ ಮಾಡುತ್ತೇವೆ, ಎಂದೆಲ್ಲ ಮೇಲೆ ಬಿದ್ದು ಹೇಳಿ ನನ್ನ ಮತ್ತು ನನ್ನಾಕೆಯ ತಲೆ ಕೆಡಿಸಿದರು; ನಾನು ಅವರ ಜಾಲದಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುವ ಸೂಣವಾಗಲಿಲ್ಲ. ಸಾಧ್ಯವೇ ಇಲ್ಲ, ಸದ್ಯಕ್ಕೆ ನಾನು ಕಾರು ಕೊಳ್ಳುವುದಿಲ್ಲ, ಎಂದು ಹೇಳು ಹೇಳಿ ಅವರನ್ನು ಸಾಗಹಾಕುವಷ್ಟರಲ್ಲಿ ಸಾಕೋಸಾಕಾಯಿತು.

ಅವರಲ್ಲೆ ಹೋದ ಮೇಲೆ ನನ್ನಾಕೆ ಕೇಳಿದಳು, ನೀವು ಕಾರು ಕೊಳ್ಳೋ ವಿಷಯ ಅವರಿಗೆ ಹ್ಯಾಗೆ ಗೊತ್ತಾಯಿತು? ಎಂದು ನೆನಪಿನ ಗಣಿಯಲ್ಲಿ ಕೈ ಆಡಿಸಿದೆ. ಆವತ್ತು ಬೆಳಿಗ್ಗೆ ಕಚೇರಿಗೆ ಹೋಗುವಾಗ ನಗರ ಸಾರಿಗೆ ಬಸ್ಸಿನಲ್ಲಿ ನನ್ನ ಪಕ್ಕ ಕುಳಿತಿದ್ದ ಗೆಳೆಯನಿಗೆ ಲೋಕಾಭಿರಾಮವಾಗಿ ಹೇಳಿದ್ದೆ, ಏನಯ್ಯ ಗುಂಡ, ಎಷ್ಟೊಂದು ಕಾರುಗಳು, ಎಷ್ಟೊಂದು ಸವಲತ್ತುಗಳು, ಒಂದು ಕಾರು ಕೊಂಡರೆ ಹೇಗೆ ಎಂದು ಮನಸ್ಸಿಗೆ ಬರುತ್ತದೆ, ಎಂದು, ಅದೂ ತುಂಬಿದ ಬಸ್ಸಿನಲ್ಲಿ. ಈ ಮಾತು ವೈರಸ್ಸಿನಂತೆ ಹೇಗೆ ಹರಡಿಬಿಟ್ಟಿದೆ ನೋಡು! ಎಲ್ಲಿ ಗಿರಾಕಿ ಸಿಗುವರೋ ಎಂದು ಕಾದಿರುವ ಸ್ತ್ರೀಗಳು. ಅದಕ್ಕಿಂತ ಮುಖ್ಯವಾಗಿ ಅವರಿಗೆ ನನ್ನ ಮನೆ ವಿಳಾಸ, ದೂರವಾಣಿ ಸಂಖ್ಯೆ, ಇವೆಲ್ಲ ಹೇಗೆ ಸಿಕ್ಕದೆ ಎಂಬುದೇ ನನ್ನ ಅಚ್ಚರಿಯ ವಿಷಯ, ಎಂದು ನನ್ನಾಕೆಗೆ ಎಂದೆ.

★★★



ದಾನಶೂರ ಕರ್ಣ!!

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR